ವಿಷಯಾನುಕ್ರಮಣಿಕೆ

# ಪರಿಶುದ್ಧವೇದಾಂತಸಾರ

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
2004

ಅಧ್ಯಾತ್ಮಗ್ರಂಥಾವಳಿ

# ಪರಿಶುದ್ಧವೇದಾಂತಸಾರ

ಲೇಖಕರು:
ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೯೫

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ-೫೭೩ ೨೧೧
೨೦೦೪

ಮೊದಲನೆಯ ಮುದ್ರಣ : ೧೯೫೭ ೧೦೦೦ ಪ್ರತಿಗಳು
ಎರಡನೆಯ ಮುದ್ರಣ : ೧೯೬೩ ೨೦೦೦ ಪ್ರತಿಗಳು
ಮೂರನೆಯ ಮುದ್ರಣ : ೨೦೦೪ ೧೦೦೦ ಪ್ರತಿಗಳು

ಪುಟಗಳು : vi + 44

**ಬೆಲೆ : 10/- ರೂ.**

**ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು**
(All Rights Reserved)

ಅಕ್ಷರ ಜೋಡಣೆ
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 45, ನೇತಾಜಿರಸ್ತೆ
ನಾಗಸಂದ್ರ, ತ್ಯಾಗರಾಜನಗರ ಪೋಸ್ಟ್
ಬೆಂಗಳೂರು - 28 ✆ : 26764650

ಮುದ್ರಣಸ್ಥಾನ :
**ಶ್ರೀ ಗಣೇಶಮಾರುತಿ ಪ್ರಿಂಟರ್ಸ್**
76, ಮೂರನೇ ಬ್ಲಾಕ್, 6ನೇ ಮೇನ್
ತ್ಯಾಗರಾಜನಗರ, ಬೆಂಗಳೂರು - 560 028
✆ : 26766342

# ಮೂರನೆಯ ಮುದ್ರಣಕ್ಕೆ ಮುನ್ನುಡಿ

೧೯೬೩ರಲ್ಲಿ ಎರಡನೆಯ ಬಾರಿಗೆ ಮುದ್ರಣವಾಗಿದ್ದ ಪುಸ್ತಕಗಳೆಲ್ಲವೂ ಮಾರಾಟವಾದ್ದರಿಂದ, ಶ್ರೀ ಶ್ರೀಗಳವರ ಗ್ರಂಥಗಳು ಎಲ್ಲಾಕಾಲದಲ್ಲಿಯೂ ಜಿಜ್ಞಾಸುಗಳಿಗೆ ದೊರಕಬೇಕೆಂಬ ಉದ್ದೇಶದಿಂದ ಈಗ ಮೂರನೆಯ ಬಾರಿಗೆ ತಪ್ಪುಗಳನ್ನೆಲ್ಲಾ ತಿದ್ದಿ, ಈ ಗ್ರಂಥವನ್ನು ಹೊರತರಲಾಗಿದೆ. ಎಂದಿನಂತೆ ಅಧ್ಯಾತ್ಮಾಭಿಮಾನಿಗಳು ಗ್ರಂಥಪ್ರಕಟಣೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ತಾರಣ ಸಂವತ್ಸರದ
ಆಷಾಢ ಬಹುಳ ತ್ರಯೋದಶಿ
ತಾ॥ ೧೫-೦೭-೨೦೦೪

**ಪ್ರಕಾಶಕರು**

# ಮೊದಲ ಮಾತು

ಉಪನಿಷತ್ತುಗಳ ಸಿದ್ಧಾಂತವು ಯಾವದೆಂಬುದನ್ನು ಭಗವದ್ಗೀತೆಯಲ್ಲಿಯೂ ಬ್ರಹ್ಮಸೂತ್ರಗಳಲ್ಲಿಯೂ ವಿಶದಗೊಳಿಸಿ ನಿರ್ಣಯಿಸಿದ್ದರೂ ವಿವಿಧವಾದ ಮತಭೇದಗಳಿಂದ ವಿಚಾರಕರ ಮನಸ್ಸಿನಲ್ಲಿ ಯಾವದೊಂದು ನಿಶ್ಚಯವೂ ಆಗದೆ ಇರುತ್ತದೆ. ಶ್ರೀಶಂಕರಭಗವತ್ಪಾದಾಚಾರ್ಯರವರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಈ ಸಿದ್ಧಾಂತದ ಸ್ವರೂಪವನ್ನು ಸ್ಪಷ್ಟಪಡಿಸಿದ್ದರೂ ಅವುಗಳಲ್ಲಿ ಉಪದಿಷ್ಟವಾಗಿರುವ ವೇದಾಂತದರ್ಶನವು ಯಾವದೆಂಬುದನ್ನು ಗೊತ್ತುಪಡಿಸಿಕೊಳ್ಳುವದು ಸದ್ಯಕ್ಕೆ ಅನೇಕ ಕಾರಣಗಳಿಂದ ಕಷ್ಟತರವಾಗಿರುತ್ತದೆ.

ಜಿಜ್ಞಾಸುಗಳ ಈ ಕಷ್ಟವನ್ನು ದೂರಗೊಳಿಸುವದಕ್ಕಾಗಿ ನಾನು **'ಶಾಂಕರ ವೇದಾಂತಪ್ರಕ್ರಿಯೆ', 'ಶ್ರೀಶಂಕರಭಗವತ್ಪಾದರುವರ ಸರ್ವಸಂಮತೋಪದೇಶಗಳು'**- ಎಂಬ ಎರಡು ಗ್ರಂಥಗಳನ್ನು ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಹೊರಕ್ಕೆ ತಂದಿರುತ್ತೇನೆ. ಅವುಗಳಿಗೆ ಪ್ರವೇಶಿಕೆಯಾಗಿ ಇನ್ನೂ ಸುಲಭವಾಗಿರುವ ಚಿಕ್ಕ ಗ್ರಂಥವೊಂದು ಅವಶ್ಯವೆಂದು ಕೆಲವರು ಸೂಚಿಸಿದ್ದರಿಂದ ಈ ಪುಸ್ತಕವನ್ನು ಬರೆದಿರುತ್ತೇನೆ.

ಈ ಚಿಕ್ಕಪುಸ್ತಕದಲ್ಲಿ ಮುಖ್ಯವಾಗಿ ಶಂಕರಭಗವತ್ಪಾದರವರಿಗೆ ಸಂಮತವಾದ ಪರಿಶುದ್ಧವೇದಾಂತದ ಸಿದ್ಧಾಂತಭಾಗವನ್ನು ಮಾತ್ರ ಸಂಗ್ರಹಿಸಿರುತ್ತೇನೆ. ಇದರಲ್ಲಿ ಮುಖ್ಯವಾಗಿ 'ಶಾಸ್ತ್ರದೃಷ್ಟಿ', 'ಸಾಕ್ಷಿಸ್ವರೂಪ', 'ಆತ್ಮನ ಅದ್ವಿತೀಯತ್ವ' - ಈ ಮೂರು ವಿಷಯಗಳನ್ನು ಜಿಜ್ಞಾಸುಗಳಿಗೆ ಮನದಟ್ಟಾಗುವಂತೆ ಸುಲಭವಾದ ಶೈಲಿಯಿಂದ ವಿವರಿಸುವದಕ್ಕೆ ಯತ್ನಿಸಿರುತ್ತೇನೆ.

'ಜ್ಞಾನಸಾಧನಗಳು' ಎಂಬ ಏಳನೆಯ ಭಾಗವು ಬಹಳ ಸಂಗ್ರಹವಾಗಿರುತ್ತದೆ. ಅವಕಾಶವು ದೊರೆತರೆ ಅದನ್ನು ಈ ಗ್ರಂಥದಷ್ಟು ಪರಿಮಾಣದಲ್ಲಿ ವಿಸ್ತರಿಸಿ ಬರೆಯಬೇಕೆಂಬ ಅಭಿಪ್ರಾಯವಿದೆ.

ಗ್ರಂಥದ ಪ್ರತಿಪಾದನೆಯನ್ನು ಇನ್ನೂ ಸುಲಭವಾಗಿ ಮಾಡುವ ಬಗೆಗೆ ಬರಬಹುದಾದ ಸೂಚನೆಗಳನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ದ್ವಿತೀಯ ಮುದ್ರಣದಲ್ಲಿ ಅವುಗಳನ್ನು ಉಪಯೋಗಿಸಿಕೊಳ್ಳುವೆನು.

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೇವಿಳಂಬಿಸಂವತ್ಸರದ
ಆಶ್ವಯುಜ ಶುಕ್ಲ ಪಾಡ್ಯ
ತಾ|| ೨೪-೦೯-೧೯೫೭

**ಗ್ರಂಥಕರ್ತ**

# ದ್ವಿತೀಯ ಮುದ್ರಣಕ್ಕೆ ಮುನ್ನುಡಿ

ಈ ಗ್ರಂಥವು ಹೊರಬಿದ್ದು ಆರುವರ್ಷಗಳಾದವು. ಪ್ರತಿಗಳೆಲ್ಲ ಮುಗಿದು ಹೋದದ್ದರಿಂದ ಗ್ರಂಥಶರೀರದಲ್ಲಿ ಅವಶ್ಯವೆಂದು ತೋರಿದ ಕೆಲವು ಮಾರ್ಪಾಡುಗಳನ್ನು ಅಲ್ಲಲ್ಲಿ ಮಾಡಿ ಮತ್ತೆ ಪ್ರಕಟಿಸಿರುತ್ತೇವೆ.

ಈ ಪುಸ್ತಕದಲ್ಲಿ ಶಾಂಕರವೇದಾಂತದ ಪರಿಶುದ್ಧಪ್ರಕ್ರಿಯೆಯ ಜೀವಾಳವೇ ಇರುವದರಿಂದ ಇದು ಬೇರೆಬೇರೆಯ ದೇಶಭಾಷೆಗಳಲ್ಲಿಯೂ ಇರತಕ್ಕದ್ದು ಅವಶ್ಯವೆಂದು ನಮಗೆ ತೋರಿದೆ. ಭಾರತದೇಶದ ಬೇರೆಬೇರೆಯ ಪ್ರಾಂತ್ಯಗಳಲ್ಲಿ ಇದು ಪ್ರಚಾರಕ್ಕೆ ಬರಲೆಂಬ ದೃಷ್ಟಿಯಿಂದ ಇದನ್ನು ಆಯಾ ಪ್ರಾಂತ್ಯದ ಭಾಷೆಗೆ ಇಳಿಸಿಕೊಳ್ಳಬೇಕೆನ್ನುವವರು ನಮಗೆ ಬರೆದುಕೊಂಡರೆ ಕೆಲವು ನಿಯಮಗಳಿಗೊಳಪಟ್ಟು ಅನುಮತಿಯನ್ನು ಕೊಡಲು ಕಾರ್ಯಾಲಯವು ಸಿದ್ಧವಾಗಿರುವದು.

ಶೋಭಕೃತುಸಂವತ್ಸರದ
ಆಶ್ವಯುಜ ಶುಕ್ಲಪೂರ್ಣಿಮಾ
ತಾ|| ೦೩-೧೦-೧೯೬೩

**ಪ್ರಕಾಶಕರು**

# ಪರಿವಿಡಿ


| | | |
|---|---|---|
| ೧. | ವಿಷಯಪ್ರವೇಶ | ೧ |
| ೨. | ವೇದಾಂತಸಿದ್ಧಾಂತ | ೪ |
| ೩. | ಅದ್ವೈತಜ್ಞಾನಕ್ಕೆ ಶಾಸ್ತ್ರದೃಷ್ಟಿ ಬೇಕು | ೮ |
| ೪. | ಶಾಸ್ತ್ರದಲ್ಲಿ ಹೇಳಿರುವ ಆತ್ಮಸ್ವರೂಪ | ೧೯ |
| ೫. | ಮುಖ್ಯಾತ್ಮ | ೨೫ |
| ೬. | ಆತ್ಮನ ಅದ್ವಿತೀಯತ್ವ | ೩೨ |
| ೭. | ಜ್ಞಾನಸಾಧನಗಳು | ೩೯ |


ஃஃஃஃஃஃஃ

॥ ಓಂ ॥

# ಪರಿಶುದ್ಧವೇದಾಂತಸಾರ

## ೧. ವಿಷಯಪ್ರವೇಶ

### ೧. ವೇದಾಂತವೆಂದರೇನು?

ವೇದಗಳ ಕೊನೆಯಲ್ಲಿರುವ ಆರಣ್ಯಕಗಳಲ್ಲಿಯೇ ಬಲುಮಟ್ಟಿಗೆ ಕಂಡು ಬರುತ್ತಿರುವ ತತ್ತ್ವವಿಚಾರದ ಭಾಗಗಳಿಗೆ **ವೇದಾಂತಗಳು** ಎಂದು ಹೆಸರು. ಅವುಗಳಿಗೆ **'ಉಪನಿಷತ್ತುಗಳು'** ಎಂಬ ಹೆಸರು ಹೆಚ್ಚು ಬಳಕೆಯಲ್ಲಿದೆ. ಉಪನಿಷತ್ತುಗಳಲ್ಲಿರುವ ಸಿದ್ಧಾಂತವನ್ನೂ ಸಾಧನವನ್ನೂ ಸಾಮಾನ್ಯರಿಗೂ ತಿಳಿಯುವಂತೆ ಭಗವದ್ಗೀತೆಯಲ್ಲಿ ವಿವರಿಸಿದೆ. ಈ ಎರಡರಲ್ಲಿಯೂ ಅಡಕವಾಗಿರುವ ವಿಷಯಗಳನ್ನು ನ್ಯಾಯಬದ್ಧವಾಗಿ ಸೂತ್ರಗಳ ರೂಪದಲ್ಲಿ ಬಾದರಾಯಣರು ಕ್ರಮಪಡಿಸಿಟ್ಟಿರುತ್ತಾರೆ. ಉಪನಿಷತ್ತುಗಳು, ಗೀತೆ, ವೇದಾಂತಸೂತ್ರಗಳು- ಈ ಮೂರನ್ನೂ ಒಟ್ಟುಗೂಡಿಸಿ **'ಪ್ರಸ್ಥಾನತ್ರಯ'** ಎಂದು ಕರೆಯುವದುಂಟು. ಹೀಗೆ ಪ್ರಸ್ಥಾನತ್ರಯದಲ್ಲಿ ಹೇಳಿರುವ ದರ್ಶನವನ್ನೂ **ವೇದಾಂತ**ವೆಂದೇ ಕರೆಯುತ್ತಾರೆ.

### ೨. ಪರಿಶುದ್ಧವೇದಾಂತವೆಂದರೇನು?

ವೇದಾಂತದಲ್ಲಿ ನಿಜವಾಗಿ ಅಡಕವಾಗಿರುವ ಸಿದ್ಧಾಂತವು ಯಾವದು? ಆ ಸಿದ್ಧಾಂತವನ್ನು ಮನಗಾಣುವದಕ್ಕೆ ಮಾಡಬೇಕಾದ ಸಾಧನಗಳು ಯಾವವು? ವೇದಾಂತಜ್ಞಾನದಿಂದ ಆಗುವ ಪ್ರಯೋಜನವು ಏನು?- ಎಂಬಿದನ್ನು ಬಹಳ ಹಿಂದಿನ ಕಾಲದಿಂದ ಇಂದಿನವರೆಗೂ ಬೇರೆಬೇರೆಯ ಆಚಾರ್ಯರುಗಳು ತಮ್ಮತಮ್ಮ ತಿಳಿವಳಿಕೆಯ ಮಟ್ಟದಿಂದ ವಿವರಿಸಿರುತ್ತಾರೆ. ಅವುಗಳೆಲ್ಲವೂ

ವೇದಾಂತದರ್ಶನಗಳೇ ಆದರೂ ಮೂಲವೇದಾಂತಗಳಾದ ಉಪನಿಷತ್ತುಗಳಲ್ಲಿ ಕಾಣದೆ ಇರುವ ಹಲವು ವಿಚಾರಗಳನ್ನು ಅವುಗಳಲ್ಲಿ ಬೆರಕೆಮಾಡಿರುವದು ಕಂಡುಬರುತ್ತದೆ. ಯಾವ ಹೊರಗಿನ ವಿಚಾರಗಳ ಬೆರಕೆಯೂ ಇಲ್ಲದ ಅಪ್ಪಟ ವೇದಾಂತವನ್ನು **ಶ್ರೀಗೌಡಪಾದಾಚಾರ್ಯರೂ ಶ್ರೀಶಂಕರಭಗವತ್ಪಾದರವರೂ** ನಿಃಸಂಶಯವಾಗಿ ಜಿಜ್ಞಾಸುಗಳಿಗೆ ಮನಗಾಣಿಸಿಕೊಟ್ಟು ವೇದಾಂತಗ್ರಂಥಗಳನ್ನು ಬರೆದಿರುತ್ತಾರೆ. ಶ್ರೀಗೌಡಪಾದರವರ ಮಾಂಡೂಕ್ಯಕಾರಿಕೆಗಳು ಮತ್ತು ಶ್ರೀಶಂಕರಭಗವತ್ಪಾದರವರ ಪ್ರಸ್ಥಾನತ್ರಯ ಭಾಷ್ಯಗಳು - ಇವುಗಳಿಂದ ತಿಳಿಯಬರುವ ವೇದಾಂತವನ್ನು ಇಲ್ಲಿ **ಪರಿಶುದ್ಧ ವೇದಾಂತ**ವೆಂದು ಕರೆಯಲಾಗಿದೆ.

## ೩. ಪರಿಶುದ್ಧವೇದಾಂತದ ಹೆಗ್ಗುರುತುಗಳು ಯಾವುವು?

ಈಗಿನ ಕಾಲದಲ್ಲಿ ಶ್ರೀಶಂಕರಭಗವತ್ಪಾದರವರ ಹೆಸರಿನಲ್ಲಿ ಅನೇಕ ಪ್ರಕರಣಗಳು ಹುಟ್ಟಿರುತ್ತವೆ. ಆ ಆಚಾರ್ಯರ ಉಪದೇಶಗಳೆಂದು ಬಗೆಬಗೆಯ ಮತಗಳು ಪ್ರಚಾರಕ್ಕೆ ಬಂದಿರುತ್ತವೆ. ಆದರೆ ಪರಿಶುದ್ಧವೇದಾಂತಕ್ಕೆ ಕೆಲವು ಹೆಗ್ಗುರುತುಗಳು ಇರುತ್ತವೆ. ಮೊದಲನೆಯದಾಗಿ ಅದಕ್ಕೆ ಉಪನಿಷದ್ಭಾಷ್ಯ, ಗೀತಾಭಾಷ್ಯ, ಅಥವಾ ಸೂತ್ರಭಾಷ್ಯ - ಈ ಮೂರರಲ್ಲೊಂದರ **ಆಧಾರ**ವಿರಬೇಕು. ಎರಡನೆಯದು ಆ ವೇದಾಂತದಲ್ಲಿ ಹೇಳಿರುವದು ಶಾಸ್ತ್ರಾಧಾರದಿಂದಲೇ ಆಗಿದ್ದರೂ ಯುಕ್ತ್ಯನುಭವಗಳಿಗೆ ಹೊಂದುಗಡೆಯಾಗಿರಬೇಕು. **ಯುಕ್ತಿ**ಯೆಂದರೆ ಸುಮ್ಮನೆ 'ಏಕೆಂದರೆ', 'ಆದ್ದರಿಂದ'- ಎಂಬ ಮಾತುಗಳಿಂದ ಕೂಡಿದ ವಾಕ್ಯಸಮೂಹವಲ್ಲ; ತರ್ಕಶಾಸ್ತ್ರಪಙ್ಕ್ತಿಗಳ ಗಡಿಬಿಡಿಯೂ ಅಲ್ಲ; ಅನುಭವಕ್ಕೆ ಹೊಂದುಗಡೆಯಾಗುವಂತೆ, ಹೆಜ್ಜೆಹೆಜ್ಜೆಗೂ ನಿಷ್ಪಕ್ಷಪಾತಿಯಾದ ಬುದ್ಧಿಗೆ ಒಪ್ಪಾಗುವಂತೆ ತಿಳಿಸಿಕೊಡುವ ವಿಷಯವಿಚಾರಕ್ರಮವೇ ಯುಕ್ತಿ. **ಅನುಭವ**ವೆಂದರೆ ಯಾವನಾದರೊಬ್ಬ ವ್ಯಕ್ತಿಗೆ ಮಾತ್ರ ಮೀಸಲಾಗಿರುವ ಸಮಾಧಿ, ತಪಃಸಿದ್ಧಿ- ಮುಂತಾದವುಗಳಿಂದಾಗುವ ಅರಿವಲ್ಲ; ಲೋಕದಲ್ಲಿ ಎಲ್ಲರಿಗೂ ಈಗ ಇದ್ದುಕೊಂಡಿರುವ ಸಾರ್ವತ್ರಿಕಾನುಭವವೇ ಅದು. ಸಾರ್ವತ್ರಿಕವಾಗಿ ಎಲ್ಲರಿಗೂ ಹೊರಗಿನ ವಿಷಯಗಳನ್ನು ಕುರಿತ ಇಂದ್ರಿಯಾನುಭವವು ಆಗುತ್ತಿರುತ್ತದೆ.

ಮನಸ್ಸಿನಲ್ಲಿ ಸುಖದುಃಖಾದಿಗಳ ಅನುಭವವೂ ಆಗುತ್ತಿರುತ್ತದೆ. ಆದರೆ ಈಗ ನಾವು ಹೇಳುತ್ತಿರುವ ಸಾರ್ವತ್ರಿಕಾನುಭವವೆಂದರೆ ವಿಷಯರಾಶಿಯನ್ನೆಲ್ಲ ಕುರಿತ ಒಟ್ಟು ಅನುಭವವು ; ದೇಶಕಾಲಾವಸ್ಥೆಗಳ ಕಟ್ಟಿಲ್ಲದೆ ಎಲ್ಲಕ್ಕೂ ಅನ್ವಯಿಸುವ **ಪೂರ್ಣಾನುಭವವು.** ವೇದಾಂತಶಾಸ್ತ್ರವು ಹೇಳುವ ತತ್ತ್ವವು ಈ ಸಾರ್ವತ್ರಿಕಾನುಭವಕ್ಕೆ ಹೊಂದುಗಡೆಯಾಗಿರುವದರಿಂದಲೇ ಅದು **ಪ್ರಮಾಣ**ವೆನಿಸಿರುತ್ತದೆ. ಪ್ರಮಾಣ ಎಂದರೆ ಪ್ರಮಿತಿಗೆ, ಸರಿಯಾದ ಅನುಭವಕ್ಕೆ, ಅಸಾಧಾರಣವಾಗಿ ಸಾಧನವಾಗಿರುವದು. ಅದನ್ನು ಶ್ರದ್ಧೆಯಿಂದ ನಂಬಬೇಕಾದ ಆವಶ್ಯಕತೆಯೇನೂ ಇರುವದಿಲ್ಲ.

## ೪. ಈ ಗ್ರಂಥದ ಉದ್ದೇಶವೇನು?

ಶಾಂಕರವೇದಾಂತದ ಸಾರವನ್ನು ಸ್ವಲ್ಪದರಲ್ಲಿ ಹಿಂಡಿ ಎಲ್ಲರಿಗೂ ತಿಳಿಯುವ ತಿಳಿಗನ್ನಡದಲ್ಲಿ ಓದುಗರ ಮುಂದೆ ಇಡುವದು ; ಶ್ರೀಶಂಕರಾಚಾರ್ಯರು ಬರೆದಿರುವ ದೊಡ್ಡ ಗ್ರಂಥಗಳನ್ನು ಓದಿ ಅವುಗಳಿಂದ ಲಾಭವನ್ನು ಪಡೆಯಬೇಕೆಂಬ ಆಧ್ಯಾತ್ಮಿಕದ ಹಸಿವನ್ನುಂಟುಮಾಡುವದು- ಇವೆರಡೇ ಈ ಚಿಕ್ಕಪುಸ್ತಕದ ಉದ್ದೇಶಗಳು. ಮೂಲಪ್ರಮಾಣವಚನಗಳನ್ನು ಇಲ್ಲಿ ಆದಷ್ಟು ಕಡಿಮೆಯಾಗಿ ಕೊಟ್ಟಿರುತ್ತದೆ ; ಸಂಸ್ಕೃತವು ಚೆನ್ನಾಗಿ ತಿಳಿಯದೆ ಇರುವವರಿಗೂ ಅವುಗಳ ಅರ್ಥವು ಆಗುವಂತೆ ಅವುಗಳ ಅಭಿಪ್ರಾಯವನ್ನು ಅಲ್ಲಲ್ಲಿಯೇ ವಿಶದಗೊಳಿಸಿರುತ್ತದೆ. ಸಾರ್ವತ್ರಿಕಾನುಭವಕ್ಕೆ ಹೊಂದಿಕೆಯಾದ ಯುಕ್ತಿಗಳನ್ನೇ ಇಲ್ಲಿ ಜೋಡಿಸಿ ವಿಷಯವನ್ನು ತಿಳಿಸಿದೆ. ತತ್ತ್ವದ ವಿಚಾರದಲ್ಲಿ **ಶ್ರದ್ಧೆ**ಯೂ, ಇದನ್ನು ಅವಶ್ಯವಾಗಿ ತಿಳಿದುಕೊಂಡೇ ತೀರುವೆನೆಂಬ **ತಾತ್ಪರ್ಯವೂ** ಹೊರಗಿನ ವಿಷಯಗಳ ಕಡೆಗೆ ಇಂದ್ರಿಯಗಳನ್ನೂ ಅಂತಃಕರಣವನ್ನೂ ಚದರಿಸುವದಕ್ಕೆ ಎಡೆಗೊಡದೆ ಇರುವ **ಸಂಯಮವೂ** ಇದ್ದರೆ ಸಾಕು, ಅವಶ್ಯವಾಗಿ ಇಲ್ಲಿ ಹೇಳಿರುವ ವಿಷಯಗಳು ಎಲ್ಲರಿಗೂ ಮನದಟ್ಟಾಗುವವು.

ooooooo

# ೨. ವೇದಾಂತಸಿದ್ಧಾಂತ

## ೫. ಅದ್ವೈತವೇ ವೇದಾಂತಸಿದ್ಧಾಂತವು :

ವೇದಾಂತಸಿದ್ಧಾಂತವು ಯಾವದೆಂಬ ಬಗ್ಗೆ ಬಹಳಕಾಲದಿಂದಲೂ ವೇದಾಂತಿಗಳಲ್ಲಿ ವಿವಾದವುಂಟಾಗಿದೆ. ಸದ್ಯಕ್ಕೆ ದ್ವೈತ, ವಿಶಿಷ್ಟಾದ್ವೈತ, ಅದ್ವೈತ- ಎಂಬ ಮೂರು ಸಿದ್ಧಾಂತಗಳು ದಕ್ಷಿಣದೇಶದಲ್ಲಿ ಹೆಚ್ಚು ಪ್ರಚಾರದಲ್ಲಿವೆ. ದ್ವೈತವೇ ವೇದಾಂತೋಕ್ತಸಿದ್ಧಾಂತವೆಂದು ಮಾಧ್ವರೂ, ವಿಶಿಷ್ಟಾದ್ವೈತವೇ ವೇದಾಂತ ಸಿದ್ಧಾಂತವೆಂದು ರಾಮಾನುಜೀಯರೂ, ಅದ್ವೈತವೇ ವೇದಾಂತಸಿದ್ಧಾಂತವೆಂದು ಶಂಕರಾನುಯಾಯಿಗಳೂ ಹೇಳುತ್ತಿದಾರೆ. ಈ ಮೂರು ಸಿದ್ಧಾಂತಗಳಲ್ಲಿ ಶ್ರೀಶಂಕರಾಚಾರ್ಯರ ಸಿದ್ಧಾಂತವು ಅತಿಪ್ರಾಚೀನವಾಗಿರುತ್ತದೆ. 'सदेव सोम्येदमग्र आसीदेकमेवाद्वितीयम्' ಅಪ್ಪ, ಇದು ಮೊದಲು ತನಗೆರಡನೆಯದಿಲ್ಲದ ಸತ್ತೊಂದೇ ಆಗಿತ್ತು (ಛಾಂ. ೬-೨-೧), 'आत्मा वा इदमेक एवाग्र आसीत्' ಇದು ಮೊದಲು ಆತ್ಮನೊಬ್ಬನೇ ಆಗಿತ್ತು (ಐ. ೧-೧-೧)- ಇವೇ ಮುಂತಾದ ಶ್ರುತಿಗಳಲ್ಲಿ ಆತ್ಮನೊಬ್ಬನೇ ಮೊದಲಿದ್ದು ಈ ಎಲ್ಲಾ ಜಗತ್ತೂ ಆದನು- ಎಂದುಹೇಳಿದೆ. 'ब्रह्मैवेदं विश्वम्' ಇದೆಲ್ಲವೂ ಬ್ರಹ್ಮವೇ (ಮುಂ. ೨-೨-೧೨), 'आत्मैवेदं सर्वम्' ಇದೆಲ್ಲವೂ ಆತ್ಮನೇ (ಛಾಂ.೭-೨೫- ೨)- ಎಂಬಿವೇ ಮುಂತಾದ ಶ್ರುತಿಗಳಲ್ಲಿ ಈಗಲೂ ಈ ಪ್ರಪಂಚವೆಲ್ಲವೂ ಬ್ರಹ್ಮವೇ ಎಂದು ಹೇಳಿದೆ. ಬ್ರಹ್ಮವೆಂದರೆ ಅನಂತವಾದ ಮಿಗಿಲಿಲ್ಲದ ತತ್ತ್ವ, ಅದೊಂದೇ ಪರಮಾರ್ಥ ಎಂಬುದು ಅನುಭವಕ್ಕೆ ಹೊಂದುತ್ತದೆ. ಆದ್ದರಿಂದ ಅದ್ವೈತವೇ ವೇದಾಂತಸಿದ್ಧಾಂತವೆಂದು ಶ್ರೀಶಂಕರಾಚಾರ್ಯರು ಹೇಳುತ್ತಾರೆ. ಅದ್ವೈತವು ಅನುಭವಕ್ಕೆ ಹೇಗೆ ಹೊಂದುವದೆಂಬುದನ್ನು ಈ ಗ್ರಂಥದಲ್ಲಿ ಮುಂದೆ ತಿಳಿಸಿಕೊಡಲಾಗುವದು.

## ೬. ಅದ್ವೈತವೆಂದರೇನು?

ಅದ್ವೈತ, ಅಭೇದ- ಎಂಬ ಶಬ್ದಗಳನ್ನು ಪರ್ಯಾಯವೆಂದು ಕೆಲವರು

ತಿಳಿಯುತ್ತಾರೆ. ಇದು ಸರಿಯಲ್ಲ. ಭೇದ ಎಂದರೆ ಬೇರೆಬೇರೆಯಾಗಿರುವದು ; ಕುದುರೆ, ಕೋಣ- ಇವೆರಡೂ ಬೇರೆಬೇರೆ ; ಆದ್ದರಿಂದ ಅವೆರಡಕ್ಕೂ ಭೇದವಿದೆ, ಅಭೇದವಿಲ್ಲ. 'ಜೀವ, ಬ್ರಹ್ಮ- ಇವರಿಬ್ಬರೂ ಭಿನ್ನರಾಗಿರುತ್ತಾರೆ, ಅವರಿಬ್ಬರೂ ಮೊದಲು ಒಂದೇ ಬ್ರಹ್ಮವಾಗಿದ್ದರು, ಮುಂದೆಯೂ ಒಂದೇ ಬ್ರಹ್ಮವಾಗುತ್ತಾರೆ'- ಎಂದು ಕೆಲವರು ವೇದಾಂತಿಗಳು ವಾದಿಸುತ್ತಿದ್ದರು. ಬ್ರಹ್ಮದಿಂದ ಜೀವರು ಹುಟ್ಟಿರುತ್ತಾರೆ ; ಆದ್ದರಿಂದ ಆ ದೃಷ್ಟಿಯಲ್ಲಿ ಜೀವನು ಬ್ರಹ್ಮಕ್ಕಿಂತ ಬೇರೆಯಲ್ಲವಾದರೂ ಒಂದು ಬಗೆಯಿಂದ ಅದಕ್ಕಿಂತ ಬೇರೆಯೂ ಆಗಿರುತ್ತಾನೆ- ಎಂಬ **ಭೇದಾಭೇದವಾದ**ವನ್ನು **ಆಶ್ಮರಥ್ಯರು** ಹೇಳುತ್ತಿದ್ದರೆಂದೂ, ಜೀವನು ಈಗ ಸುಖದುಃಖಾದಿಗಳನ್ನನುಭವಿಸುವ ಸಂಸಾರಿಯಾಗಿ ಬೇರೆಯೇ ಆಗಿದ್ದರೂ ಧ್ಯಾನಾದಿಸಾಧನಗಳಿಂದ ನಿರ್ಮಲನಾಗಿ ಸತ್ತಬಳಿಕ ಬ್ರಹ್ಮದಲ್ಲಿ ಒಂದಾಗುತ್ತಾನೆ- ಎಂದು **ಔಡುಲೋಮಿ** ಎಂಬವರು ಹೇಳುತ್ತಿದ್ದರೆಂದೂ (ವೇ.ಸೂ.೧-೪-೨೦, ೨೧) **ಬ್ರಹ್ಮಸೂತ್ರ**ದಲ್ಲಿದೆ. ಈಗ್ಗೆ ಬ್ರಹ್ಮಕ್ಕೂ ಜೀವನಿಗೂ ಭೇದಾಭೇದವಿರಲಿ, ಭೇದವೇ ಇರಲಿ, ಮುಕ್ತಿಯಾಗುವಾಗ ಜೀವನು ಬ್ರಹ್ಮವೇ ಆಗಿಬಿಡುತ್ತಾನೆ- ಎಂದಿರುವದರಿಂದ ಈ ಇಬ್ಬರು ವಾದಿಗಳೂ **ಅಭೇದವಾದಿ**ಗಳೇ ಆಗಿರುತ್ತಾರೆ ; ಆದರೂ ಅವರು **ಅದ್ವೈತಿ**ಗಳಲ್ಲ.

**ಅದ್ವೈತ**ವೆಂದರೆ ದ್ವೈತವಿಲ್ಲದ್ದು- ಎಂದರ್ಥ. **'ದ್ವಿಧೇತಂ ದ್ವೀತಮಿತ್ಯಾಹುಸ್ತದ್ಭಾವೋ ದ್ವೈತಮುಚ್ಯತೇ । ತನ್ನಿಷೇಧೇನ ಚಾದ್ವೈತಂ ಪ್ರತ್ಯಗ್ವಸ್ತ್ವಭಿಧೀಯತೇ ॥'** ಎರಡು ಬಗೆಯಾಗಿ ವಿಂಗಡಿಸಿಕೊಂಡಿರುವದು ದ್ವೀತವು; ಆ ದ್ವೀತದ ಸ್ವಭಾವವೇ ದ್ವೈತವೆನಿಸುತ್ತದೆ ; ಎಲ್ಲಕ್ಕೂ ಒಳಗಿರುವ ನಮ್ಮ ಆತ್ಮನಲ್ಲಿ ಯಾವ ದ್ವೈತವೂ ಇಲ್ಲವಾದ್ದರಿಂದ ಆ ಆತ್ಮವಸ್ತುವಿಗೆ ಅದ್ವೈತವೆಂದು ಹೆಸರು(ಬೃ.ವಾ.೪-೩-೧೮೦೭)- ಎಂದು ಶ್ರೀಶಂಕರಾಚಾರ್ಯರ ಶಿಷ್ಯರಾದ **ಸುರೇಶ್ವರಾಚಾರ್ಯರು** ಬರೆದಿರುತ್ತಾರೆ. ಬ್ರಹ್ಮದಲ್ಲಿ ದ್ವೈತವಿಲ್ಲ ಎಂದರೆ ಎರಡು ಕವಲುಗಳಿಲ್ಲ, ಹೆಚ್ಚುಂಟು- ಎಂದೇನೂ ಅಭಿಪ್ರಾಯವಲ್ಲ. **'ದ್ವಿಧಾ ತ್ರಿಧಾ ವಾ ಬಹುಧಾ ಕಾರಣಂ ಸದ್ಭವೇದಿಹ । ತಸ್ಮಾತ್ಮನಿ**

**ನಿಷಿದ್ಧತ್ವಾದಾತ್ಮಾSದ್ವೈತೋ ಭವೇತ್ತತಃ ॥'** ಎರಡು ಬಗೆಯಾಗಲಿ, ಮೂರು ಬಗೆಯಾಗಲಿ, ಇನ್ನೂ ಹೆಚ್ಚಿನ ಸಂಖ್ಯೆಯ ವೈವಿಧ್ಯವಾಗಲಿ- ಯಾವ ಬಹುತ್ವವೂ ಆತ್ಮನಲ್ಲಿರುವದಿಲ್ಲ ; ಆದ್ದರಿಂದ ಆತ್ಮನಿಗೆ **ಅದ್ವೈತ**ನೆಂದು ಹೆಸರು(ಬೃ.ವಾ.೪-೩-೧೮೧೮). ಆತ್ಮನಿಗೆ ಎರಡನೆಯವನಾದ ಮತ್ತೊಬ್ಬ ಆತ್ಮನಿಲ್ಲ. ಅವನಿಗೆ ಎರಡನೆಯದಾದ ಅನಾತ್ಮವೂ ಇಲ್ಲ. 'आत्मैवेदं सर्वम्' ಇರುವದೆಲ್ಲವೂ ಆತ್ಮನೇ ಆಗಿರುತ್ತದೆ (ಛಾಂ. ೭-೨೫-೨)— ಎಂಬುದೇ ಶ್ರುತಿಯ ಕಟ್ಟಕಡೆಯ ಮಾತು. ಇದನ್ನೇ **ಅದ್ವೈತಸಿದ್ಧಾಂತ**ವೆನ್ನುವರು.

## ೭. ಬ್ರಹ್ಮಾತ್ಮೈಕತ್ವವೇ ವೇದಾಂತಸಂಮತ :

**ಆತ್ಮನೆಂದರೆ ಸ್ವರೂಪವು.** ನನ್ನ ಆತ್ಮನು ಎಂದರೆ ನಿಜವಾಗಿರುವ ನನ್ನ ಸ್ವರೂಪವೆಂದೇ ಅರ್ಥ. ಶ್ರುತಿಗಳಲ್ಲಿ ಬ್ರಹ್ಮವನ್ನು ಆತ್ಮನೆಂದೇ ಕರೆದಿರುತ್ತದೆ. ನಮಗೆ ಕಾಣುವ ಪ್ರಪಂಚವೆಲ್ಲವೂ ಬ್ರಹ್ಮವೇ ಎಂದು ಶ್ರುತಿಯಲ್ಲಿ ಸಾರಿಸಾರಿ ಹೇಳಿರುವಂತೆ, ಅದೆಲ್ಲವೂ ನಮ್ಮ ಆತ್ಮನೇ ಎಂದೂ ಸಾರಿ ಸಾರಿ ಹೇಳಿರುತ್ತದೆ. ಉದಾಹರಣೆಗೆ ನೋಡಿರಿ : 'ब्रह्मैवेदममृतं पुरस्ताद्ब्रह्म पश्चाद्ब्रह्म दक्षिणतश्चोत्तरेण । अधश्चोर्ध्वं च प्रसृतं ब्रह्मैवेदं विश्वमिदं वरिष्ठम् ॥' ಈ ಮುಂದೆ ಕಾಣಿಸುತ್ತಿರುವದು ಬ್ರಹ್ಮವೇ, ಹಿಂದುಗಡೆ ಕಾಣಿಸುತ್ತಿರುವದು ಬ್ರಹ್ಮವೇ ; ಎಡಕ್ಕೂ ಬಲಕ್ಕೂ ಇರುವದು ನಿಜವಾಗಿ ಬ್ರಹ್ಮವೇ ; ಕೆಳಕ್ಕೂ ಮೇಲಕ್ಕೂ ಹರಡಿಕೊಂಡು ಕಾಣಿಸುತ್ತಿರುವದು ಬ್ರಹ್ಮವೇ ; ಈ ಜಗತ್ತೆಲ್ಲವೂ ಶ್ರೇಷ್ಠವಾದ ಬ್ರಹ್ಮವೇ (ಮುಂ.೨-೨-೧೨). 'आत्मैवाधस्तादात्मोपरिष्टादात्मा पश्चादात्मा पुरस्तादात्मा दक्षिणत आत्मोत्तरत आत्मैवेदं सर्वम्' ಕೆಳಗಿರುವದು ಆತ್ಮನೇ ; ಮೇಲಿರುವದೂ ಆತ್ಮನೇ ; ಹಿಂದುಗಡೆಯಿರುವದೂ ಆತ್ಮನೇ ; ಮುಂದುಗಡೆಯಿರುವದೂ ಆತ್ಮನೇ; ಬಲಕ್ಕಿರುವದೂ ಆತ್ಮನೇ ; ಎಡಕ್ಕಿರುವದೂ ಆತ್ಮನೇ ; ಇದೆಲ್ಲವೂ ಆತ್ಮನೇ (ಛಾಂ. ೭-೨೫-೨).

ನಮ್ಮ ಆತ್ಮನು ಒಬ್ಬನು, ಬ್ರಹ್ಮವು ಬೇರೊಂದು ; ಈ ಆತ್ಮನು ಎಂದಾದರೊಂದು ದಿನ, ಯಾವದಾದರೊಂದು ಸಾಧನದ ಫಲವಾಗಿ ಬ್ರಹ್ಮವಾಗುವನು- ಎಂದು ತಿಳಿಯಬಾರದು. ಎಲ್ಲೆಲ್ಲಿ ಏನೇನು ಕಾಣಿಸುತ್ತಿರುವದೋ ಅದೆಲ್ಲವೂ ನಿಜವಾಗಿ ಬ್ರಹ್ಮವೇ, ಅದೆಲ್ಲವೂ ಆತ್ಮನೇ. **ಬ್ರಹ್ಮವೇ ಆತ್ಮನು, ಆತ್ಮನೇ ಬ್ರಹ್ಮವು.** ಬ್ರಹ್ಮವೆಂಬುದು ಪರೋಕ್ಷವಾಗಿ ಯಾವದೋ ದೇಶದಲ್ಲಿ, ಯಾವದೋ ಕಾಲದಲ್ಲಿರುವ ವಸ್ತುವಲ್ಲ ; ನಮ್ಮ ಆತ್ಮನೆಂಬುದು ಈಗ ಸಂಸಾರಿಯಾಗಿದ್ದುಕೊಂಡು ಆಮೇಲೆ ಯಾವಾಗಲೋ ಒಮ್ಮೆ, ಎಲ್ಲಿಯೋ ಒಂದು ದೇಶದಲ್ಲಿ ಅಸಂಸಾರಿಯಾದ ಬ್ರಹ್ಮಸ್ವರೂಪವನ್ನು ಪಡೆದುಕೊಳ್ಳುವದಿಲ್ಲ. 'तदेतद्ब्रह्मापूर्वमनपरमनन्तरमबाह्ममयमात्मा ब्रह्म सर्वानुभूः' ಆ ಬ್ರಹ್ಮವೆಂಬುದಕ್ಕೆ ಹಿಂದಿದ್ದ ಕಾರಣವಿಲ್ಲ; ಮುಂದೆ ಉಂಟಾಗುವ ಕಾರ್ಯವಿಲ್ಲ; ಅದಕ್ಕೆ ಒಳಗಿಲ್ಲ, ಹೊರಗಿಲ್ಲ ; ಈ ಎಲ್ಲವನ್ನೂ ಅನುಭವಿಸುತ್ತಿರುವ ನಮ್ಮ ಆತ್ಮನೇ ಬ್ರಹ್ಮವು (ಬೃ.೨-೫-೧೯). **ಎಲ್ಲಾ ಕಾಲದಲ್ಲಿಯೂ ಎಲ್ಲಾ ದೇಶದಲ್ಲಿಯೂ ಇರುವದೆಲ್ಲವೂ ಒಂದೇ, ಅದೇ ಬ್ರಹ್ಮವು, ಅದೇ ನಮ್ಮ ಆತ್ಮನು - ಎಂದು ಉಪನಿಷತ್ತುಗಳಲ್ಲಿ ಯಾವ ಸಂಶಯವೂ ಬಾರದಂತೆ ಘಂಟಾಘೋಷವಾಗಿ ಸಾರಿರುತ್ತದೆ. 'ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ'** ಅರ್ಜುನನೆ, ಸರ್ವಪ್ರಾಣಿಗಳ ಹೃದಯದಲ್ಲಿಯೂ ಇರುವ ಆತ್ಮನೇ ನಾನು (ಗೀ.೧೦-೨೦)- ಎಂದು **ಗೀತೆಯಲ್ಲಿ** ಭಗವಂತನು ಸ್ಪಷ್ಟವಾಗಿ ತಿಳಿಸಿರುತ್ತಾನೆ. **'ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ'** ಶ್ರುತಿಗಳಲ್ಲಿ ಭಗವಂತನನ್ನು ಆತ್ಮನೆಂದೇ ಚಿಂತಿಸಬೇಕೆಂದು ತಿಳಿಸುವ ವಾಕ್ಯಗಳಿವೆ, ಆತ್ಮನೆಂದು ತಿಳಿಯಬೇಕೆಂದೇ ಉಪದೇಶಿಸಿದೆ (ವೇ.ಸೂ.೪-೧-೩)- ಎಂದು **ಬ್ರಹ್ಮಸೂತ್ರದಲ್ಲಿ**ಯೂ ತಿಳಿಸಿಕೊಟ್ಟಿರುತ್ತದೆ.

ಽಽಽಽಽಽಽಽ

# ೩. ಅದ್ವೈತಜ್ಞಾನಕ್ಕೆ ಶಾಸ್ತ್ರದೃಷ್ಟಿ ಬೇಕು

## ೮. ವೇದಾಂತೋಪದೇಶದ ವಿಷಯದಲ್ಲುಂಟಾಗುವ ಸಂಶಯ:

ನಮ್ಮ ಸಾಮಾನ್ಯಾನುಭವದಲ್ಲಿ ಕಾಣುವ ಪ್ರಪಂಚವು ಚೇತನಾ-ಚೇತನಾತ್ಮಕವಾಗಿ ಬಗೆಬಗೆಯಾಗಿ ಕಾಣಿಸುತ್ತಿದೆ, ಏಕರೂಪವಾಗಿರುವದಿಲ್ಲ, ಇಲ್ಲಿರುವ ಪ್ರಾಣಿಗಳ ಶರೀರಾದಿಗಳು ಬಗೆಬಗೆಯಾಗಿರುತ್ತವೆ, ಅವುಗಳಿಗೆ ಸುಖದುಃಖಗಳೂ ತಾರತಮ್ಯದಿಂದ ಅನುಭವಕ್ಕೆ ಬರುತ್ತಿವೆ; ಅವುಗಳಲ್ಲಿ ಒಂದರ ಸುಖದುಃಖಗಳು ಮತ್ತೊಂದಕ್ಕಿರುವದಿಲ್ಲವಾದ್ದರಿಂದ ಇಂಥ ಪ್ರಾಣಿಗಳ ಆತ್ಮಗಳು ಬೇರೆಬೇರೆಯಾಗಿ ಅನೇಕವಾಗಿವೆಯೆಂದೇ ತೋರುತ್ತದೆ. ಈ ಜಗತ್ತಿನಲ್ಲಿ ಕಾಣುವ ಕ್ರಿಯೆಗಳೂ ಅವುಗಳ ಸಾಧನಗಳೂ ಆ ಕ್ರಿಯೆಗಳ ಫಲಗಳೂ ಬೇರೆಬೇರೆಯ ನಿಯಮಕ್ಕೆ ಒಳಪಟ್ಟಿರುವದನ್ನು ನೋಡಿದರೆ ಇದನ್ನೆಲ್ಲ ಆಳುತ್ತಿರುವ ಪರಮೇಶ್ವರನೊಬ್ಬನು ಈ ಜೀವಾತ್ಮರುಗಳಿಗಿಂತ ಬೇರೆಯೇ ಆಗಿರಬೇಕೆಂದು ತೋರುತ್ತದೆ **ನ್ಯಾಯವೈಶೇಷಿಕಯೋಗಾದಿದರ್ಶನಕಾರರೂ** ವೇದಬಾಹ್ಯವಾದ ಕೆಲವು ಮತಗಳ ಅನುಯಾಯಿಗಳೂ 'ಜಗತ್ತು ಸತ್ಯವಾಗಿದೆ, ಇದರಲ್ಲಿ ಅನೇಕ ಜೀವರು ಇರುತ್ತಾರೆ, ಜೀವರಿಗಿಂತ ಬೇರೆಯಾಗಿರುವ ಈಶ್ವರನೊಬ್ಬನು ಇದಾನೆ'- ಎಂದೇ ಹೇಳಿರುತ್ತಾರೆ. ಅದ್ವೈತಿಗಳಲ್ಲದ ಕೆಲವರು ವೇದಾಂತಿಗಳೂ ಇದನ್ನು ಒಪ್ಪಿರುತ್ತಾರೆ. ಹೀಗಿರುವಲ್ಲಿ ಇದೆಲ್ಲ ಅದ್ವೈತವಾದ ಬ್ರಹ್ಮವೇ, ಆ ಬ್ರಹ್ಮವು ನಮ್ಮಗಳ ಆತ್ಮನೇ- ಎಂದು ನಂಬುವದು ಹೇಗೆ?- ಎಂಬ ಸಂಶಯವು ಎದ್ದುಕೊಳ್ಳುವದು ಸ್ವಾಭಾವಿಕವಾಗಿದೆ. ಈ ಸಂಶಯವನ್ನು ಬಗೆಹರಿಸುವ ಯುಕ್ತ್ಯನುಭವಗಳನ್ನು ವೇದಾಂತಗಳಲ್ಲಿ ಹೇಳಿಯೂ ಇದೆ. ಉಪನಿಷತ್ತುಗಳಲ್ಲಾಗಲಿ ಭಗವದ್ಗೀತೆಯಲ್ಲಾಗಲಿ ಸಿದ್ಧಾಂತವನ್ನು ಸುಮ್ಮನೆ ನಂಬಿರಿ- ಎಂದು ಉಪದೇಶಿಸಿರುವದಿಲ್ಲ. ಕೇಳುವವರಿಗೆ ಮನದಟ್ಟಾಗುವಂತೆ ಯುಕ್ತಿಗಳನ್ನು ಕೊಟ್ಟು ಅನುಭವಕ್ಕೆ ಸಂಮತವಾದ ವಿಷಯವನ್ನೇ ತಿಳಿಸಿಕೊಟ್ಟಿದೆ.

## ೯. ಲೋಕದೃಷ್ಟಿ, ಶಾಸ್ತ್ರದೃಷ್ಟಿ- ಇವುಗಳ ವಿವೇಕದ ಅವಶ್ಯಕತೆ :

ವೇದಾಂತಸಿದ್ಧಾಂತವನ್ನು ಮನಗಾಣಬೇಕೆಂದು ಬಯಸುವವರು ಮೊದಲು ಲೋಕದೃಷ್ಟಿ, ಶಾಸ್ತ್ರದೃಷ್ಟಿ- ಎಂಬ ಎರಡು ದೃಷ್ಟಿಗಳನ್ನು ವಿವೇಕಮಾಡಿ ಅರಿತುಕೊಳ್ಳುವದು ಅವಶ್ಯವಾಗಿರುತ್ತದೆ. ಬೇರೆಬೇರೆ ದೃಷ್ಟಿಗಳಿಂದ ನೋಡಿದರೆ ಒಂದೇ ವಸ್ತುವಿನ ಜ್ಞಾನವು ಬೇರೆಬೇರೆಯಾಗಿಯೇ ಆಗುತ್ತಿರುತ್ತದೆ ಎಂಬುದು ನಮಗೆಲ್ಲ ತಿಳಿದೇ ಇದೆ. ದೂರಕ್ಕೆ ಒಂದು ಸಣ್ಣ ಗಿಡವೆಂದು ನಮಗೆ ಕಾಣುತ್ತಿದ್ದದ್ದು ಹತ್ತಿರಕ್ಕೆ ಹೋದಂತೆ ಒಂದು ಮರವೆಂಬ ಭಾವನೆ ಬರಬಹುದು. ಇನ್ನೂ ಹತ್ತಿರಕ್ಕೆ ಹೋದರೆ ಅದು ಎರಡು ಮರಗಳೆಂದೂ ಗೊತ್ತಾಗಬಹುದು. ಅಲ್ಲವೆ ? ಇಲ್ಲಿ ದೂರದಿಂದ ನೋಡಿದ ದೃಷ್ಟಿ, ಹತ್ತಿರಕ್ಕೆ ಹೋಗಿ ನೋಡಿದ ದೃಷ್ಟಿ- ಇವುಗಳ ಭೇದದಿಂದ ವಸ್ತುವಿನ ಜ್ಞಾನವು ಬೇರೆಬೇರೆಯಾಗಿ ಆಯಿತು. ಇದರಂತೆ ಒಂದು ಬಟ್ಟಲಲ್ಲಿರುವ ನೀರನ್ನು ಬರಿಯ ಕಣ್ಣಿನಿಂದ ನೋಡಿದಾಗ ಅದು ಶುದ್ಧವಾಗಿದೆಯೆಂದೇ ಕಾಣಿಸುತ್ತಿದ್ದರೂ ಅದನ್ನು ದುರ್ಬೀನಿನಿಂದ ನೋಡಿದಾಗ ಅದರಲ್ಲಿ ಎಷ್ಟೋ ಕಲ್ಮಷಗಳು ತೂಗಾಡಿಕೊಂಡು ಇರುವದು ಗೊತ್ತಾಗಬಹುದು. ಇಲ್ಲಿ ಸ್ಥೂಲದೃಷ್ಟಿ, ಸೂಕ್ಷ್ಮದೃಷ್ಟಿ- ಎಂಬ ದೃಷ್ಟಿಭೇದದಿಂದ ಒಂದೇ ವಸ್ತುವಿನ ಜ್ಞಾನವು ಬೇರೆಬೇರೆ ಆಯಿತು. ಪರೆಯಾದವರ ಕಣ್ಣಿನ ದೃಷ್ಟಿಗಿಂತ ಎಳೆಗಣ್ಣಿನವರ ದೃಷ್ಟಿಗೆ ಅದೇ ವಸ್ತುವು ಬೇರೆಬೇರೆಯಾಗಿ ಕಾಣಿಸುತ್ತದೆಯಲ್ಲವೆ? ಅಲ್ಲಿ ದೋಷಯುಕ್ತದೃಷ್ಟಿ, ನಿರ್ಮಲದೃಷ್ಟಿ- ಎಂದು ದೃಷ್ಟಿಭೇದದಿಂದ ಒಂದೇ ವಸ್ತುವಿನ ಜ್ಞಾನವು ಬೇರೆಬೇರೆಯಾಗಿರುತ್ತದೆ. ಕಣ್ಣಿನಲ್ಲಿ ಯಾವ ದೋಷವೂ ಇಲ್ಲದಿದ್ದರೂ ವಸ್ತುವಿನ ಸ್ವಲ್ಪಭಾಗವನ್ನು ಮಾತ್ರ ನೋಡಿ ತಟ್ಟನೆ ಮಾಡಿಕೊಂಡ ತೀರ್ಮಾನದ ಜ್ಞಾನ, ಚೆನ್ನಾಗಿ ಅದನ್ನು ಎಲ್ಲಾ ಕಡೆಯಲ್ಲಿಯೂ ನೋಡಿದ್ದರಿಂದ ಆಗುವ ಜ್ಞಾನ- ಇವೆರಡೂ ಬೇರೆಬೇರೆಯಾಗಬಹುದು. ಉದಾಹರಣೆಗೆ ಒಂದು ಹಣ್ಣನ್ನು ಅದರ ಮುಂದುಗಡೆಯನ್ನು ಮಾತ್ರ ನೋಡಿ ಚೆನ್ನಾಗಿದೆಯೆಂದು ತಿಳಿದುಕೊಂಡವನು ಅದನ್ನು ಕೈಗೆ ತೆಗೆದುಕೊಂಡು ಎಲ್ಲಾ ಕಡೆಯಲ್ಲಿಯೂ

ತಿರುಗಿಸಿನೋಡಲು ಅದರಲ್ಲಿ ಒಂದುಕಡೆ ಕೊಳೆತಿದೆ ಎಂದು ತಿಳಿಯಬಹುದು. ಇಲ್ಲಿ ಪರಿಚ್ಛಿನ್ನದೃಷ್ಟಿ, ಪೂರ್ಣದೃಷ್ಟಿ- ಎಂಬ ದೃಷ್ಟಿಭೇದದಿಂದ ಒಂದೇ ವಸ್ತುವಿನ ಜ್ಞಾನವು ಬೇರೆಬೇರೆಯಾಗಿರುತ್ತದೆ.

ಹೀಗೆ ಬೇರೆಬೇರೆಯ ದೃಷ್ಟಿಗಳಿಂದ ಒಂದು ವಸ್ತುವಿನ ವಿಷಯದಲ್ಲಿ ಬೇರೆಬೇರೆಯ ಜ್ಞಾನಗಳುಂಟಾಗುವದುಂಟು. ಅವುಗಳಲ್ಲಿ ಒಂದು ಸರಿಯಾದ ತಿಳಿವಳಿಕೆ ; ಇನ್ನೊಂದು ತಪ್ಪುತಿಳಿವಳಿಕೆ - ಎಂಬುದನ್ನು ಯುಕ್ತಿಯಿಂದಲೂ ಅನುಭವದಿಂದಲೂ ನಿಶ್ಚಯಿಸಿಕೊಳ್ಳಬೇಕಾಗುತ್ತದೆ. ಅಲ್ಲವೆ? ಇದರಂತೆ ಪ್ರಕೃತದಲ್ಲಿ ಒಂದು ದೃಷ್ಟಿಯಿಂದ ದ್ವೈತವೂ ಇನ್ನೊಂದು ದೃಷ್ಟಿಯಿಂದ ಅದ್ವೈತವೂ ತೋರುತ್ತಿದೆಯಾದರೆ ಅವೆರಡರಲ್ಲಿ ಯಾವದು ಸರಿಯಾದ ತಿಳಿವಳಿಕೆಯ ಫಲ, ಯಾವದು ತಪ್ಪು ತಿಳಿವಳಿಕೆಯ ಫಲ?- ಎಂಬುದನ್ನು ಯುಕ್ತ್ಯನುಭವಗಳ ಆಧಾರದಿಂದ ನಿಶ್ಚಯಿಸಿಕೊಳ್ಳಬೇಕಾಗುವದು. ವೇದಾಂತಿಗಳ ಅಭಿಪ್ರಾಯದಲ್ಲಿ ತತ್ತ್ವನಿರ್ಧಾರಕ್ಕೆ ಬೇಕಾದ ದೃಷ್ಟಿಯೊಂದು ಇದೆ. ಅದನ್ನು ಅವರು **ಶಾಸ್ತ್ರದೃಷ್ಟಿ** ಎಂದು ಕರೆಯುತ್ತಾರೆ. ಶಾಸ್ತ್ರವೆಂದರೆ ವೇದವು ; ವೇದದಲ್ಲಿ ತಿಳಿಸುವ ದೃಷ್ಟಿವಿಶೇಷವೇ ಶಾಸ್ತ್ರದೃಷ್ಟಿ, ಲೋಕದಲ್ಲಿ ಜನರು ಸಾಮಾನ್ಯವಾಗಿ ಉಪಯೋಗಿಸುತ್ತಿರುವ ದೃಷ್ಟಿಗೆ **ಲೋಕದೃಷ್ಟಿ**ಯೆಂದು ಹೆಸರು. ಲೋಕದೃಷ್ಟಿಯಿಂದ ನೋಡಿದಾಗ ದ್ವೈತವೇ ಸತ್ಯವೆಂಬ ತಿಳಿವಳಿಕೆಯುಂಟಾಗುತ್ತದೆ ; ಶಾಸ್ತ್ರದೃಷ್ಟಿಯಿಂದ ನೋಡಿದಾಗ ಅದ್ವೈತವೇ ಸತ್ಯವೆಂಬ ತಿಳಿವಳಿಕೆಯುಂಟಾಗುತ್ತದೆ ; ಈ ಎರಡು ದೃಷ್ಟಿಗಳೊಳಗೆ ಲೋಕದೃಷ್ಟಿಯು ತತ್ತ್ವಕ್ಕೆ ದೂರವಾಗಿರುವ ತೋರಿಕೆಯನ್ನು ತಿಳಿಸಿಕೊಡುವ ದೃಷ್ಟಿ, ಹೊರಗಿನ ವಿಷಯಗಳನ್ನು ಮಾತ್ರ ತಿಳಿಸಿಕೊಡಬಲ್ಲ ಇಂದ್ರಿಯಗಳ ಸಹಾಯದಿಂದ ನೋಡುವ ಸ್ಥೂಲದೃಷ್ಟಿ, ಕೆಲವು ದೋಷಗಳಿಂದೊಡಗೂಡಿರುವ ದೃಷ್ಟಿ, ತತ್ತ್ವದ ಒಂದು ಭಾಗವನ್ನು ಮಾತ್ರ ಕಾಣುವ ಪರಿಚ್ಛಿನ್ನದೃಷ್ಟಿ. ಶಾಸ್ತ್ರದೃಷ್ಟಿಯೊ, ಎಂದರೆ ತತ್ತ್ವಕ್ಕೆ ಹತ್ತಿರವಾಗಿರುವ ದೃಷ್ಟಿ, ಸೂಕ್ಷ್ಮದೃಷ್ಟಿ,

ನಿರ್ಮಲದೃಷ್ಟಿ, ಪೂರ್ಣದೃಷ್ಟಿ. ಆದ್ದರಿಂದ ಲೋಕದೃಷ್ಟಿಯಿಂದ ನೋಡಿದಾಗ ದ್ವೈತವು ಸತ್ಯವೆಂದು ತೋರಿದರೂ ಶಾಸ್ತ್ರದೃಷ್ಟಿಯಿಂದ ನೋಡಿದಾಗ ಬರುವ ಅನುಭವವನ್ನನುಸರಿಸಿ ಅದ್ವೈತವೇ ಪರಮಾರ್ಥವೆಂದು ನಿಶ್ಚಯಿಸಬೇಕು- ಎಂಬುದು ವೇದಾಂತಿಗಳ ಮತವು.

## ೧೦. ಲೋಕದೃಷ್ಟಿಯ ಸ್ವರೂಪವೂ ಪರಿಮಿತಿಯೂ :

ಲೋಕದೃಷ್ಟಿ ಎಂದರೆ ಇಂದ್ರಿಯಗಳಿಂದ ವಿಷಯಗಳನ್ನು ಅರಿತುಕೊಳ್ಳುವ ದೃಷ್ಟಿ. ನನಗೊಂದು **ಶರೀರ**ವಿದೆ ; ಈ ಶರೀರವನ್ನಾಶ್ರಯಿಸಿಕೊಂಡಿರುವ **ಇಂದ್ರಿಯಗಳ** ಸಹಾಯದಿಂದ ಹೊರಗಿನ ವಿಷಯಗಳನ್ನರಿತುಕೊಂಡು ಬೇಕಾದದ್ದನ್ನು ತೆಗೆದುಕೊಂಡು ಬೇಡವಾದದ್ದನ್ನು ಬಿಡುವ ಕರ್ತೃವು ನಾನು ; **ಅಂತಃಕರಣವು,** ಎಂದರೆ ಮನಸ್ಸು, ಬುದ್ಧಿ, ಚಿತ್ತ- ಎಂದು ಬೇರೆಬೇರೆ ಹೆಸರುಗಳಿಂದ ತಿಳಿದುಬರುವ ನನ್ನೊಳಗಿನ ಕರಣವು, ಈ ಇಂದ್ರಿಯಗಳಿಂದಾಗುವ ಅರಿವನ್ನು ಒಂದೊಂದಾಗಿ ಆರಿಸಿಕೊಳ್ಳುವದೆಂಬ ವಿಕಲ್ಪ, ಇದು ಇಂಥದ್ದೆಂದು ತೀರ್ಮಾನಿಸುವ ನಿಶ್ಚಯ, ಸಾಮಾನ್ಯವಾಗಿ ಅರಿಯುವ ಮತ್ತು ನೆನಪಿಗೆ ತಂದುಕೊಳ್ಳುವ ಅನುಸಂಧಾನ- ಇವುಗಳ ಮೂಲಕವಾಗಿಯೂ, ಈ ಹೊರಗಿನ ಅನುಭವಗಳನ್ನು ಒಂದಕ್ಕೊಂದನ್ನು ಜೋಡಿಸಿ ಊಹಿಸುವದರ ಮೂಲಕವೂ ಸುಖದುಃಖಗಳನ್ನು ನನಗೆ ಉಂಟುಮಾಡುವ ಸಾಧನವು. ಹೀಗೆಂಬ ತಿಳಿವಳಿಕೆಯು ನಮಗೆ ಈ ಲೋಕದೃಷ್ಟಿಯಿಂದಲೇ ಉಂಟಾಗಿರುತ್ತದೆ.

ಈ ಲೋಕದೃಷ್ಟಿಯು ಪ್ರತ್ಯಕ್ಷ, ಅನುಮಾನ- ಮುಂತಾದ **ಪ್ರಮಾಣ**ಗಳಿಂದ ವ್ಯವಹಾರವನ್ನು ಮಾಡುವದಕ್ಕೆ ಸಾಧಕವಾಗಿರುತ್ತದೆ. ವಿಷಯಗಳ ತಿಳಿವಳಿಕೆಯನ್ನು ಸಂಪಾದಿಸಿಕೊಂಡು ಅವುಗಳಲ್ಲಿ ನಮಗೆ ಇಷ್ಟವಾದದ್ದನ್ನು ಪಡೆದುಕೊಳ್ಳುವದು, ಅನಿಷ್ಟವಾದದ್ದನ್ನು ದೂರವಿರಿಸುವದು- ಎಂಬ ವ್ಯವಹಾರಕ್ಕೆ ಈ ದೃಷ್ಟಿಯು ಅಡಿಗಲ್ಲಾಗಿರುತ್ತದೆ. ಹೊರಗಿನ ವಿಷಯಗಳ ಭೋಗದಿಂದ ನಮಗೆ ಸುಖವೂ ದುಃಖವೂ ಆಗುತ್ತಿರುತ್ತದೆ ; ಸುಖವನ್ನುಂಟು

ಮಾಡುವ ವಿಷಯಗಳು ನಮಗೆ ಪ್ರಿಯ, ದುಃಖವನ್ನುಂಟುಮಾಡುವ ವಿಷಯಗಳು ಅಪ್ರಿಯ. ಪ್ರಿಯವಾದ ವಿಷಯಗಳಲ್ಲಿ ನಮಗೆ ರಾಗವುಂಟಾಗುತ್ತದೆ, ಅಪ್ರಿಯವಾದ ವಿಷಯಗಳಲ್ಲಿ ನಮಗೆ ದ್ವೇಷವುಂಟಾಗುತ್ತದೆ. ಇದಿಷ್ಟೂ **ಪ್ರತ್ಯಕ್ಷ**ದಿಂದಲೇ- ಹೊರಗೆ ಇಂದ್ರಿಯಗಳಿಂದಾಗುವ ಪ್ರತ್ಯಕ್ಷ, ಒಳಗೆ ಮನಸ್ಸಿನಿಂದಾಗುವ ಪ್ರತ್ಯಕ್ಷ- ಈ ಎರಡರೊಳಗೊಂದರಿಂದಲೇ ಆಗುವ ಅನುಭವವು. ಇನ್ನು **ಅನುಮಾನ**ದಿಂದ ಹೊರಗಿನ ವಿಷಯಗಳನ್ನೇ ಅಲ್ಲದೆ ನಾವು ನಮ್ಮಂತೆಯೇ ಈ ಲೋಕದಲ್ಲಿ ವ್ಯವಹಾರಮಾಡುತ್ತಿರುವ ಮನುಷ್ಯರು, ಪ್ರಾಣಿಗಳು- ಮುಂತಾದವುಗಳ ಅರಿವನ್ನು ಮಾಡಿಕೊಳ್ಳುತ್ತಿರುವೆವು. ಆ ಮನುಷ್ಯರಿಗೂ ಪ್ರಾಣಿಗಳಿಗೂ ಇಷ್ಟವಾದದ್ದು, ಅನಿಷ್ಟವಾದದ್ದು, ಪ್ರಿಯಾಪ್ರಿಯಗಳು, ಸುಖದುಃಖಗಳು- ಇವೆಲ್ಲವೂ ಆಗುತ್ತಿರುವವೆಂದೂ ಊಹಿಸಿಕೊಂಡಿರುವೆವು. ಈ ನಂಬಿಕೆಯ ಆಧಾರದಿಂದಲೇ ಲೋಕದಲ್ಲಿರುವ ಆ ಮನುಷ್ಯರು, ಪ್ರಾಣಿಗಳು- ಮೊದಲಾದವರೂ ನಮಗೆ ಬೇಕಾದವರೊ, ಬೇಡವಾದವರೊ, ಉದಾಸೀನರೊ- ಆಗಿರುತ್ತಾರೆಂದು ಮಾಡಿಕೊಂಡು ಅವರನ್ನು ಪ್ರೀತಿಸುತ್ತಲೊ, ದ್ವೇಷಿಸುತ್ತಲೊ ಇರುವೆವು. ಇದಿಷ್ಟೂ **ಇಹಲೋಕವ್ಯವಹಾರ**ವೆನಿಸುತ್ತದೆ. ಈ ವ್ಯವಹಾರಕ್ಕೆಲ್ಲ ಲೋಕದೃಷ್ಟಿಯೇ ಆಧಾರವಾಗಿರುತ್ತದೆ.

ಹೀಗೆ ಲೋಕದೃಷ್ಟಿಯು ನಮಗೆ ವ್ಯವಹಾರದಲ್ಲಿ ಪ್ರಯೋಜನಕರವಾಗಿದ್ದರೂ ತತ್ತ್ವವನ್ನು ಕಂಡುಹಿಡಿಯುವದಕ್ಕೆ ಇದು ಸಾಲದು. ಏಕೆಂದರೆ ನಾವು ಶರೀರವುಳ್ಳವರು, ಇಂದ್ರಿಯಗಳನ್ನೂ ಅಂತಃಕರಣವನ್ನೂ ಉಪಯೋಗಿಸುವವರು, ನಮಗೆ ಬೇಕಾದ ಹೊರಗಿನ ವಿಷಯಗಳನ್ನು ಸಂಪಾದಿಸಿ ಅಥವಾ ಬೇಡವಾದ ವಿಷಯಗಳನ್ನು ದೂರವಾಗಿರಿಸಿಕೊಂಡು ದುಃಖವನ್ನು ಪರಿಹಾರಮಾಡಿಕೊಂಡು ಸುಖವನ್ನು ಸಂಪಾದಿಸಿಕೊಳ್ಳುವವರು- ಎಂಬ ದೃಷ್ಟಿಯು ನಮಗೆಲ್ಲ ಮೂಕಜಂತುಗಳಿಗಿರುವಂತೆಯೇ ಸ್ವಭಾವದಿಂದಲೇ ಇದ್ದುಬಿಟ್ಟಿದೆಯೇ ಹೊರತು ಇದು ಇಡಿಯ ಪ್ರಪಂಚದ ಪರಮಾರ್ಥವು

ಯಾವದು- ಎಂಬುದನ್ನು ಗೊತ್ತುಮಾಡಿಕೊಳ್ಳುವದಕ್ಕೆಂದು ನಾವು ವಿಚಾರಪೂರ್ವಕವಾಗಿ ಏರ್ಪಡಿಸಿಕೊಂಡಿರುವ ಸಾಧನವಲ್ಲ. ನಮಗೆ ನಿಜವಾಗಿಯೂ ಈ ಶರೀರಾದಿಗಳು ಸಂಬಂಧಿಸಿಕೊಂಡಿವೆಯೊ, ಇಲ್ಲವೊ, ಅವು ನಮಗೆ ಸೇರಿಕೊಂಡಿರುವಂತೆ ಸುಮ್ಮನೆ ಕಾಣಿಸುತ್ತಿರುವವೊ?- ಎಂಬುದನ್ನು ನಾವು ಯಾರೂ ವಿಚಾರಮಾಡಿಲ್ಲ. ಈ ಶರೀರಾದಿಗಳ ಗುಂಪುಳ್ಳವನು ನಾನು, ಈ ಪದಾರ್ಥಗಳು ನನ್ನವು ; ಮಿಕ್ಕವುಗಳೆಲ್ಲ ನನಗೆ ಸಂಬಂಧಪಟ್ಟವಲ್ಲ, ಅವು ಮತ್ತೆ ಬೇರೆ ಮನುಷ್ಯರಿಗೆ ಅಥವಾ ಪ್ರಾಣಿಗಳಿಗೆ ಸೇರಿರುತ್ತವೆ- ಎಂದು ಸ್ವಭಾವದಿಂದಲೇ ನಮಗೆ ತೋರುತ್ತಿರುವದು ನಿಜ. ಆದರೆ ಹೀಗೆ ತೋರಿದ್ದೆಲ್ಲ ನಿಜವೆಂದು ನಾವು ಯಾರೂ ನಂಬುವದಿಲ್ಲ. ಕನಸಿನಲ್ಲಿ ನಮಗೆ ಎಷ್ಟೋ ದೃಶ್ಯಗಳು ಕಾಣಿಸುತ್ತಿರುವವು. ಅಲ್ಲಿ ಕಾಣುವ ಮನುಷ್ಯರು, ಪ್ರಾಣಿಗಳು, ವಸ್ತುಗಳು, ಭೂಮಿ, ಸಮುದ್ರ, ಬೆಟ್ಟ, ಸೂರ್ಯ, ಚಂದ್ರ- ಮುಂತಾದವುಗಳು ನಿಜವಾಗಿಯೂ ಹಾಗಿರುವವೆಂದೇ ನಾವು ಆಗ್ಗೆ ನಂಬಿಕೊಂಡೇ ಇರುತ್ತೇವೆ. ಆದರೇನು? ಎಚ್ಚತ್ತಕೂಡಲೇ, ಅವೆಲ್ಲವೂ ಹುಸಿಯಾಗಿಬಿಡುತ್ತವೆ. ಲೋಕದೃಷ್ಟಿಯಿಂದ ನಮಗೆ ನಿಜವೆಂದು ತೋರುತ್ತಿರುವದೆಲ್ಲ ನಿಜವಾಗಿಯೂ ನಿಜವೊ, ಅಥವಾ ಸುಮ್ಮನೆ ನಿಜವೆಂದು ತೋರುತ್ತಿರುವದೊ? ಇದನ್ನು ನಾವು ಒಳಹೊಕ್ಕು ವಿಚಾರಮಾಡಬೇಕು. ವಿಚಾರಮಾಡದೆ ನಂಬಿದಲ್ಲಿ ತತ್ತ್ವವಾಗಲಾರದು.

## ೧೧. ಶಾಸ್ತ್ರದೃಷ್ಟಿಯ ಅವಲಂಬನೆಯಲ್ಲಿ ಎರಡು ವಿಧ :

ಸಾಮಾನ್ಯವಾದ ಲೋಕದೃಷ್ಟಿಯು ಈ ಜನ್ಮದಲ್ಲಿ ನಮಗೆ ಆಗುತ್ತಿರುವ ಇಷ್ಟಪ್ರಾಪ್ತಿ, ಅನಿಷ್ಟನಿವೃತ್ತಿ- ಇವುಗಳಿಗೆ ಮಾತ್ರ ಸಂಬಂಧಿಸಿರುತ್ತದೆ. ಭೌತಿಕಶಾಸ್ತ್ರವು ಅನೇಕ ಯಂತ್ರಗಳ ಸಹಾಯದಿಂದ ನಮಗೆ ಬೇಕಾದ ಭೋಗ್ಯವಸ್ತುಗಳ ತಿಳಿವಳಿಕೆಯನ್ನು ಹೆಚ್ಚಿಸಿಕೊಡುತ್ತದೆ ; ನಮ್ಮ ವ್ಯವಹಾರದಲ್ಲಿ ಕೆಲವು ಸೌಕರ್ಯಗಳನ್ನೂ ಉಂಟುಮಾಡಿಕೊಡುತ್ತದೆ. ಅನಾಗರಿಕರಾದ ಕಾಡುಜನರ ತಿಳಿವಳಿಕೆಗಿಂತ ನಾಗರಿಕರಾದವರ ತಿಳಿವಳಿಕೆಯ ಮತ್ತು ವ್ಯವಹಾರದ

ಮಟ್ಟವು ಮೇಲ್ತರದ್ದಾಗಿರುವಂತೆಯೇ ಸಾಮಾನ್ಯಲೌಕಿಕರ ತಿಳಿವಳಿಕೆಗಿಂತಲೂ ಭೌತಿಕಶಾಸ್ತ್ರಜ್ಞರ ತಿಳಿವಳಿಕೆಯ ಮಟ್ಟವು ಮೇಲ್ತರದ್ದಾಗಿರುವದು ; ಅದನ್ನು ಬಳಸಿಕೊಳ್ಳುವ ಜನರ ವ್ಯವಹಾರದ ಮಟ್ಟವೂ ಮೇಲ್ತರದ್ದಾಗಿರುವದು. ಆದರೆ ಆ ಲೌಕಿಕಶಾಸ್ತ್ರದ ಪರಿಚಯವೂ ಸಾಮಾನ್ಯಲೋಕದೃಷ್ಟಿಯನ್ನೇ ಹಿಗ್ಗಿಸಿ ಅದಕ್ಕೆ ಹೊಂದಿಕೆಯಾಗುವ ಹೆಚ್ಚಿನ ತಿಳಿವಳಿಕೆಯನ್ನು ಕೊಟ್ಟೀತೇ ಹೊರತು ನಮ್ಮ ಈ ಜನ್ಮಕ್ಕೆ ಸಂಬಂಧಪಡದ ವಿಷಯಗಳ ತಿಳಿವಳಿಕೆಯನ್ನು ಕೊಡಲಾರದು. ನಾವು ಈ ಲೋಕದಲ್ಲಿ ಹುಟ್ಟುವದಕ್ಕಿಂತ ಮುಂಚೆ ಎಲ್ಲಿದ್ದೆವು, ಈ ಲೋಕವನ್ನು ಬಿಟ್ಟಮೇಲೆ ಎಲ್ಲಿಗೆ ಹೋಗುವೆವು? ಜನ್ಮಾಂತರಗಳಲ್ಲಿಯೂ ಲೋಕಾಂತರಗಳಲ್ಲಿಯೂ ನಮಗೆ ಹೀಗೆಯೇ ಸುಖದುಃಖಗಳು ಆಗುತ್ತಿರುವವೆ ? ಹಾಗೆ ಆಗುವದಾದರೆ ಅವುಗಳಲ್ಲಿಯೂ ಸುಖಪ್ರಾಪ್ತಿಗೂ ದುಃಖನಿವೃತ್ತಿಗೂ ಉಪಾಯವೇನು ?- ಎಂಬುದನ್ನು ಸಾಮಾನ್ಯಲೋಕದೃಷ್ಟಿಯ ಜನರು ತಾವುತಾವೇ ಊಹಿಸಿ ಕಂಡುಹಿಡಿಯಲಾರರು. ಅವರಿಗೆ ಇಂಥ ಜನ್ಮಾಂತರಗಳ ಮತ್ತು ಲೋಕಾಂತರಗಳ ವಾದವೇ ಮನಸ್ಸಿಗೆ ಹೊಳೆಯುವದಿಲ್ಲ. **ಕಠೋಪನಿಷತ್ತಿನಲ್ಲಿ** ಯಮನು ಹೇಳುವ ಒಂದು ವಾಕ್ಯವಿದೆ : **'न सांपरायः प्रतिभाति बालं प्रमाद्यन्तं वित्तमोहेन मूढम् । अयं लोको नास्ति पर इति मानी पुनः पुनर्वशमापद्यते मे ॥'** ಪರಲೋಕಸುಖವನ್ನು ಪಡೆಯುವ ಸಾಧನವು ಯಾವದು?- ಎಂಬುದು ಅವಿವೇಕಿಯಾದವನಿಗೆ ಹೊಳೆಯುವದೇ ಇಲ್ಲ. ಏಕೆಂದರೆ ಅವನಿಗೆ ಮನಸ್ಸಿನಲ್ಲಿ ಎಚ್ಚರಿಕೆ ಇರುವದಿಲ್ಲ ; ಹೆಂಡತಿ, ಮಕ್ಕಳು, ದನಕರು, ಹಣಕಾಸು, ಹೊಲಮನೆ- ಎಂಬಿವೇ ಮುಂತಾದವುಗಳಲ್ಲಿಯೇ ಆಸಕ್ತನಾಗಿ ಧನಸಂಪಾದನೆಯ ಮೋಹದಿಂದ ಏನೂ ತೋಚದೆ ಇರುವ ಅವನ ಮನಸ್ಸಿಗೆ ಮಬ್ಬು ಹತ್ತಿಕೊಂಡಿರುತ್ತದೆ ; ಹೆಂಡಿರುಮಕ್ಕಳು, ಅನ್ನಪಾನ ಮುಂತಾದವುಗಳ ಭೋಗದಿಂದ ಕೂಡಿದ ಈ ಜನ್ಮವೇ ಜನ್ಮ, ಈ ಲೋಕವೇ ಲೋಕ ; ಮತ್ತೊಂದು ಜನ್ಮವಿಲ್ಲ, ಮತ್ತೊಂದು ಲೋಕವಿಲ್ಲ ಎಂದುಕೊಂಡು ಮತ್ತೆ ಮತ್ತೆ ಮೃತ್ಯುವಿನ ವಶನಾಗುತ್ತಲೇ ಇರುತ್ತಾನೆ (ಕ.೧-೨-೬) - ಎಂದು ಅಲ್ಲಿ ಯಮನು ಹೇಳಿರುತ್ತಾನೆ. 'ಸದ್ಯಕ್ಕೆ ಸಿಕ್ಕಿದ್ದೇ ಸಾಕು'

ಎನ್ನುವ ಅವಿವೇಕಿಗಳಿಗೆ ಈ ಜನ್ಮದಲ್ಲಿಯೇ 'ಮುಂದೆ ಮುಪ್ಪಿನಕಾಲಕ್ಕೆ ನಮಗೆ ಏನು ಗತಿ?'- ಎಂಬ ವಿಚಾರವು ಕೂಡ ಹೊಳೆಯದಿರುವಂತೆಯೇ ಈ ಜನ್ಮದಲ್ಲಾಗುವ ವಿಷಯಭೋಗಗಳನ್ನು ಮಾತ್ರ ನಂಬಿಕೊಂಡಿರುವವರಿಗೆ ಮುಂದಿನ ಜನ್ಮದಲ್ಲಾಗುವ ಸುಖದುಃಖಗಳ ವಿಚಾರವೂ ಹೊಳೆಯುವದಿಲ್ಲ. ದೂರದೃಷ್ಟಿಯುಳ್ಳ ವಿವೇಕಿಗಳಿಗೆ ಮಾತ್ರ 'ನನ್ನ ಈಗಿನ ಕರ್ಮಕ್ಕೆ ಮುಂದಿನ ಜನ್ಮದಲ್ಲಿಯೂ ಲೋಕಾಂತರದಲ್ಲಿಯೂ ಫಲವಾಗುವದು ಖಂಡಿತ. ಒಳ್ಳೆಯ ಕರ್ಮವೇ ಆಗಲಿ, ಕೆಟ್ಟ ಕರ್ಮವೇ ಆಗಲಿ, ಫಲವನ್ನು ಕೊಟ್ಟಲ್ಲದೆ ಬಿಡದು. ಆದ್ದರಿಂದ ಈ ಜನ್ಮದಲ್ಲಿಯೂ ಪರಲೋಕದಲ್ಲಿಯೂ ಆಗುವ ಸುಖದುಃಖಗಳ ವಿಚಾರವನ್ನು ಮಾಡಬೇಕು' ಎಂಬ ವಿಚಾರವು ಮನಸ್ಸಿನಲ್ಲಿ ಮಿಂಚುತ್ತದೆ, ಅಂಥವರನ್ನು **ಶಾಸ್ತ್ರದೃಷ್ಟಿಯ ಮೊದಲನೆಯ ಹಂತ**ವನ್ನು ಏರಿದವರೆಂದು ತಿಳಿಯಬೇಕು.

**ಶಾಸ್ತ್ರದೃಷ್ಟಿ** ಎಂದರೆ ವೇದವು ನಮಗೆ ಒದಗಿಸಿಕೊಡುವ ದೃಷ್ಟಿ. ನಿಜವಾದ ಶಾಸ್ತ್ರವೆಂದರೆ ವೇದವೇ. ವೇದವನ್ನನುಸರಿಸಿರುವ ಸ್ಮೃತಿಪುರಾಣಾದಿಗಳು ವೇದೋಪದೇಶವನ್ನು ವಿವರಿಸಿರುವದರಿಂದಲೇ ಶಾಸ್ತ್ರವೆನಿಸುತ್ತವೆ. ಇಂದ್ರಿಯಗಳಿಗೆ ನಿಲುಕದ ಧರ್ಮಾಧರ್ಮಗಳನ್ನು ಶಾಸ್ತ್ರದೃಷ್ಟಿಯಿಂದಲೇ ಅರಿತುಕೊಳ್ಳಬೇಕು. **'ಇನ್ದ್ರಿಯಸ್ಯೇನ್ದ್ರಿಯಸ್ಯಾರ್ಥೇ ರಾಗದ್ವೇಷೌ ವ್ಯವಸ್ಥಿತೌ । ತಯೋರ್ನ ವಶಮಾಗಚ್ಛೇತ್ತೌ ಹ್ಯಸ್ಯ ಪರಿಪನ್ಥಿನೌ ॥'** ಒಂದೊಂದು ಇಂದ್ರಿಯಕ್ಕೂ ತನ್ನತನ್ನ ವಿಷಯವಾಗಿರುವ ಶಬ್ದಸ್ಪರ್ಶಾದಿಗಳಲ್ಲಿ ಇಷ್ಟವಾಗಿರುವದಾದರೆ ರಾಗವೂ, ಅನಿಷ್ಟವಾಗಿರುವದಾದರೆ ದ್ವೇಷವೂ ಅವಶ್ಯವಾಗಿ ಆಗಿಯೇತೀರುವವು. ಇದು ಲೋಕದೃಷ್ಟಿಯ ವಿಷಯವು. ಆದರೆ ಯಾವನು ಹೀಗೆ ಪ್ರಕೃತಿವಶನಾಗದೆ ಶಾಸ್ತ್ರದೃಷ್ಟಿಯನ್ನೇ ಅವಲಂಬಿಸಿರುವನೋ ಅವನು ಆ ರಾಗದ್ವೇಷಗಳಿಗೆ ವಶನಾಗದೆ ಇರುತ್ತಾನೆ. ದಾರಿಹೋಕರನ್ನು ಅಡ್ಡಗಟ್ಟುವ ಕಳ್ಳರಂತೆ ಈ ರಾಗದ್ವೇಷಗಳು ಶ್ರೇಯೋಮಾರ್ಗಕ್ಕೆ ಅಡ್ಡಲಾಗಿ ಬಂದಿರುತ್ತವೆ

(ಗೀ.೩-೩೪)- ಎಂದು ಭಗವಂತನು ಅರ್ಜುನನಿಗೆ ಹೇಳಿರುತ್ತಾನೆ. ನಮಗೆ ಈ ಜನ್ಮದಲ್ಲಿ ಮಾತ್ರವೇ ಅಲ್ಲದೆ ಜನ್ಮಾಂತರದಲ್ಲಿಯೂ ಸುಖದುಃಖಗಳು ಒದಗುವವು. ಸುಖದುಃಖಗಳಿಗೆ ಹೊರಗಿನ ವಿಷಯಗಳು ಮಾತ್ರವೇ ಕಾರಣವಲ್ಲ; ಅವು ನಿಮಿತ್ತಮಾತ್ರವಾಗಿರುತ್ತವೆ. ನಿಜವಾಗಿ ನೋಡಿದರೆ ಧರ್ಮಾಧರ್ಮಗಳೇ ಸುಖದುಃಖಗಳಿಗೆ ಕಾರಣವಾಗಿರುವವು. ಧರ್ಮದಿಂದ ಸುಖವೂ ಅಧರ್ಮದಿಂದ ದುಃಖವೂ ಆಗುವವು. ನಾವು ಬರಿಯ ಶರೀರೇಂದ್ರಿಯಗಳ ಗುಂಪಲ್ಲ ; ಇವುಗಳಿಗಿಂತ ವ್ಯತಿರಿಕ್ತವಾಗಿರುವ ಆತ್ಮಸ್ವರೂಪರು ನಾವು. ಆತ್ಮನು ನಿತ್ಯನು, ಸುಖದುಃಖಗಳು ಅನಿತ್ಯ- ಹೀಗೆಂಬ ಅತೀಂದ್ರಿಯಾರ್ಥವನ್ನು ಶಾಸ್ತ್ರವೇ ನಮಗೆ ತಿಳಿಸಿಕೊಡುತ್ತದೆ.

ಶಾಸ್ತ್ರದೃಷ್ಟಿಯು ಶರೀರಾದಿಗಳೇ ನಾವೆಂಬ ಮಿಥ್ಯಾದೃಷ್ಟಿಯನ್ನು ತಪ್ಪಿಸಿ ಶರೀರಾದಿಗಳಿಗಿಂತ ವ್ಯತಿರಿಕ್ತವಾದ ಸ್ವರೂಪವು ನಮ್ಮದೆಂಬ ತಿಳಿವಳಿಕೆಯನ್ನು ಕೊಡುವದಕ್ಕೆ ಸಾಧನವಾಗಿರುತ್ತದೆ. ನಮಗೆ ಧರ್ಮಾಧರ್ಮಗಳಿಂದ ಸುಖದುಃಖಗಳು ಜನ್ಮಜನ್ಮಾಂತರದಲ್ಲಿಯೂ ಆಗುತ್ತಿರುವವೆಂಬುದಿಷ್ಟೇ ಶಾಸ್ತ್ರದೃಷ್ಟಿಯಿಂದ ಸಿಕ್ಕುವ ತಿಳಿವಳಿಕೆ ಎಂದು" ಭಾವಿಸಬಾರದು. ಅದು ಆ ತಿಳಿವಳಿಕೆಯ ಮೊದಲನೆಯ ಮೆಟ್ಟಲು, ಅಷ್ಟೆ. ನಮ್ಮ ಆತ್ಮನು ಧರ್ಮಾಧರ್ಮಗಳನ್ನೂ ಮೀರಿರುತ್ತಾನೆ. ನಚಿಕೇತನೆಂಬ ಬಾಲಕನು ಯಮನನ್ನು ಕುರಿತು ಮಾಡಿದ ಪ್ರಶ್ನೆಯಲ್ಲಿ ಈ ದೃಷ್ಟಿಯ ಎರಡನೆಯ ಮೆಟ್ಟಲಿನ ಆತ್ಮಜ್ಞಾನವನ್ನು ಕೇಳಿರುತ್ತಾನೆ. 'अन्यत्र धर्मादन्यत्राधर्मादन्यत्रास्मात्कृताकृतात् । अन्यत्र भूताच्च भव्याच्च यत्तत्पश्यसि तद्वद' ಧರ್ಮಾಧರ್ಮಗಳನ್ನು ಮೀರಿರಬೇಕು, ಕಾರ್ಯಕಾರಣಗಳನ್ನೂ ಮೀರಿರಬೇಕು, ಭೂತಭವಿಷ್ಯದ್ವರ್ತಮಾನರೂಪವಾದ ಕಾಲವನ್ನೂ ಮೀರಿರಬೇಕು, ಅಂಥ ಆತ್ಮತತ್ತ್ವವನ್ನು ನನಗೆ ತಿಳಿಸಿಕೊಡು (ಕ.೧-೨-೧೪)- ಎಂಬುದೇ ಅವನ ಪ್ರಶ್ನೆ. ನಾವು ಶರೀರಾದಿಗಳಲ್ಲ. ಶರೀರಾದಿಗಳಿಗಿಂತ ವ್ಯತಿರಿಕ್ತರಾದ ಧರ್ಮಾಧರ್ಮವಶರಾದ ಜೀವರುಗಳೂ ಅಲ್ಲ.

ಜನ್ಮಾಂತರಗಳಲ್ಲಿಯೂ ಧರ್ಮಾಧರ್ಮಗಳುಂಟಾಗುವವೆಂಬುದನ್ನು ಅರಿತವನಿಗೆ ಆತ್ಮನು ನಿತ್ಯನೆಂದೂ ಅವನ ಸ್ವರೂಪವನ್ನು ಅರಿತುಕೊಳ್ಳುವದು ಅವಶ್ಯವೆಂದೂ ತಿಳಿದಂತಾಯಿತೇ ಹೊರತು ಆತ್ಮನ ನಿಜವಾದ ಸ್ವರೂಪವೇನೂ ತಿಳಿದಂತೆ ಆಗಲಿಲ್ಲ. ನಿಜವಾಗಿ ಆತ್ಮನು ಎಂದೆಂದಿಗೂ ಅಶರೀರನು, ಧರ್ಮಾಧರ್ಮಗಳ ಸಂಬಂಧವಾಗಲಿ ಅವುಗಳಿಂದಾಗುವ ಸುಖದುಃಖಗಳ ಸಂಬಂಧವಾಗಲಿ ಇಲ್ಲದವನು- ಎಂದು ಅರಿತುಕೊಳ್ಳಬೇಕು. ಆ ನಮ್ಮ ಸ್ವರೂಪವನ್ನು ಅರಿತುಕೊಂಡಾಗ ಆತ್ಮರುಗಳು ಅನೇಕರೆಂದೂ ಧರ್ಮಾಧರ್ಮಗಳನ್ನು ಮಾಡಿ ಸುಖದುಃಖರೂಪವಾದ ಫಲಗಳನ್ನು ಅಭವಿಸುತ್ತಿರುವವರೆಂದೂ ಈ ಪ್ರಪಂಚದಲ್ಲಿ ಅವರಿಗೆ ಬೇಕಾದ ಭೋಗ್ಯರಾಶಿಗಳು ತುಂಬಿರುವವೆಂದೂ ಈಗ ನಮಗೆ ತೋರುತ್ತಿರುವ ದ್ವೈತಜ್ಞಾನವು ಹುಸಿಯೆಂದೂ ಸ್ಫುಟವಾಗುವದು. ಅದೇ ಅದ್ವೈತಜ್ಞಾನವು. **ಇದೇ ಶಾಸ್ತ್ರದೃಷ್ಟಿಯ ಎರಡನೆಯ ಹಂತವು.**

## ೧೨. ವ್ಯಾವಹಾರಿಕದೃಷ್ಟಿ, ಪಾರಮಾರ್ಥಿಕದೃಷ್ಟಿ :

ಈ ಜನ್ಮದ ವ್ಯವಹಾರಕ್ಕೂ ಜನ್ಮಾಂತರದ ಮತ್ತು ಲೋಕಾಂತರದ ವ್ಯವಹಾರಕ್ಕೂ ಬೇಕಾಗುವ ದೃಷ್ಟಿಗಳೆರಡನ್ನೂ **ವ್ಯವಹಾರದೃಷ್ಟಿ** ಎಂಬ ಒಂದೇ ಮಾತಿನಲ್ಲಿ ಅಡಕಮಾಡಿಬಿಡಬಹುದು. ಶರೀರೇಂದ್ರಿಯಗಳ ಸಂಬಂಧವಿಲ್ಲದೆ ಧರ್ಮಾಧರ್ಮಗಳನ್ನು ಮಾಡುವದು ಸಾಧ್ಯವಿಲ್ಲವಾದ್ದರಿಂದಲೂ ಧರ್ಮಾಧರ್ಮಗಳನ್ನು ಮಾಡಿ ಬೇಕಾದದ್ದನ್ನು ಪಡೆದುಕೊಳ್ಳುವದು, ಬೇಡದ್ದನ್ನು ತಪ್ಪಿಸಿಕೊಳ್ಳುವದು- ಇದೇ ಜನ್ಮಾಂತರಕ್ಕೆ ಸಂಬಂಧಿಸಿದ ವ್ಯವಹಾರವೆನಿಸುವದಾದ್ದರಿಂದಲೂ ಆ ಶಾಸ್ತ್ರೀಯವ್ಯವಹಾರದ ದೃಷ್ಟಿಯೂ ವ್ಯವಹಾರದೃಷ್ಟಿಯಲ್ಲಿಯೇ ಅಡಕವಾಗಿರುತ್ತದೆ. ಈ ಜನ್ಮದಲ್ಲಿಯೇ ಬೇಕಾದ ಇಷ್ಟಾನಿಷ್ಟಪ್ರಾಪ್ತಿಪರಿಹಾರಗಳಿಗೆ ಸಂಬಂಧಪಟ್ಟ ವ್ಯವಹಾರವು **ಲೌಕಿಕವ್ಯವಹಾರ**ವೆನಿಸುವದು ; ಜನ್ಮಾಂತರಲೋಕಾಂತರಗಳ ಇಷ್ಟಾನಿಷ್ಟಪ್ರಾಪ್ತಿಪರಿಹಾರಗಳಿಗೆ ಸಂಬಂಧಪಟ್ಟ ವ್ಯವಹಾರವು ವೈದಿಕವ್ಯವಹಾರವು ಅಥವಾ **ಶಾಸ್ತ್ರೀಯವ್ಯವಹಾರ**ವು ಎನಿಸುವದು.

ಹೇಗೇ ಆಗಲಿ, ಇವು ಪರಮಾರ್ಥವಲ್ಲ ; ಸರಿಯಾದ ತಿಳಿವಳಿಕೆಯ ಫಲವಲ್ಲ. ಕ್ರಿಯೆ, ಕಾರಕಗಳು, ಫಲ- ನಾನು ಇದನ್ನು ಇಂಥಿಂಥ ಸಾಧನಗಳಿಂದ ಮಾಡಿ ಇಂಥಿಂಥ ಫಲಗಳನ್ನು ಅನುಭವಿಸುವವನು- ಎಂಬ ಭಾವನೆಯು ಬರುವದಕ್ಕೆ 'ನಾನು ಶರೀರವು, ಇಂದ್ರಿಯಗಳು ನನ್ನವು' ಎಂಬ ತಪ್ಪುತಿಳಿವಳಿಕೆಯೇ ಆಧಾರವಾಗಿರುತ್ತದೆ. ಈ ತಪ್ಪುತಿಳಿವಳಿಕೆಗೆ **ಅವಿದ್ಯೆ**ಯೆಂದು ಹೆಸರು ; ಇದನ್ನು ತಪ್ಪೆಂದು ತೋರಿಸುವ ಸರಿಯಾದ ತಿಳಿವಳಿಕೆಗೆ **ವಿದ್ಯೆ**ಯೆಂದು ಹೆಸರು. ವಿದ್ಯೆಯನ್ನು, ಆತ್ಮನ ನಿಜವನ್ನು ತೋರಿಸಿಕೊಡುವ ನಿಜವಾದ ತಿಳಿವಳಿಕೆಯನ್ನು, ಸಂಪಾದಿಸಿಕೊಳ್ಳಬೇಕೆನ್ನುವವರು ಶಾಸ್ತ್ರವು ಒದಗಿಸಿಕೊಡುವ **ಪರಮಾರ್ಥ ದೃಷ್ಟಿಯನ್ನು ಅವಲಂಬಿಸಬೇಕು.**

# ೪. ಶಾಸ್ತ್ರದಲ್ಲಿ ಹೇಳಿರುವ ಆತ್ಮಸ್ವರೂಪ

೧೩. ಆತ್ಮನು ನಿತ್ಯನು, ವಿಕಾರರಹಿತನು :

'ನಾನು ದೇಹಕ್ಕಿಂತ ಬೇರೆಯಾಗಿರುವೆನು'- ಎಂಬ ಜ್ಞಾನವೂ ಶಾಸ್ತ್ರದಿಂದಲೇ ಉಂಟಾಗುವದಾದರೂ ದೇಹಾದಿಗಳಿಂದ ಕೂಡಿಕೊಂಡಿರುವವನು ನಾನು- ಎಂಬ ತಿಳಿವಳಿಕೆಯಲ್ಲಿ ಶಾಸ್ತ್ರಕ್ಕೆ ಪರಮತಾತ್ಪರ್ಯವಿಲ್ಲವೆಂದು ಆಗಲೆ ಹೇಳಿದೆ. 'ನಾನು ಕರ್ತೃ, ಭೋಕ್ತೃ' - ಎಂಬ ಜ್ಞಾನವು ಮನುಷ್ಯನಿಗೆ ಸಹಜವಾಗಿಯೇ ಇರುತ್ತದೆ. ಆದರೆ ಶರೀರ, ಇಂದ್ರಿಯ, ಮನಸ್ಸು- ಇವುಗಳೊಳಗೆ ಯಾವದಾದರೊಂದನ್ನು ತಾನು ಎಂದು ಆಯಾ ಸಂದರ್ಭಕ್ಕೆ ತಕ್ಕಂತೆ ತಿಳಿದುಕೊಂಡು ವ್ಯವಹರಿಸುವದು ಜನರಿಗೆ ಸ್ವಭಾವವಾಗಿರುತ್ತದೆ. ನಾನು ಹೋಗುತ್ತೇನೆ, ಬರುತ್ತೇನೆ, ವಸ್ತುವನ್ನು ಕಾಣುತ್ತೇನೆ, ತೆಗೆದುಕೊಳ್ಳುತ್ತೇನೆ, ಶಬ್ದವನ್ನು ಕೇಳುತ್ತೇನೆ, ಆಲೋಚಿಸುತ್ತೇನೆ, ನಿಶ್ಚಯಿಸುತ್ತೇನೆ, ಸುಖದುಃಖಗಳನ್ನು ಅನುಭವಿಸುತ್ತೇನೆ- ಎಂದು ಜನರು ಅಂದುಕೊಳ್ಳುತ್ತಾರೆ. ಆದರೆ 'ಹೋಗುತ್ತೇನೆ, ಬರುತ್ತೇನೆ' ಎಂಬ ವ್ಯವಹಾರದಲ್ಲಿ ದೇಹವೇ ನಾನು ; 'ನೋಡುತ್ತೇನೆ, ಕೇಳುತ್ತೇನೆ' ಎಂಬ ವ್ಯವಹಾರದಲ್ಲಿ ಇಂದ್ರಿಯವೇ ನಾನು ; 'ಆಲೋಚಿಸುತ್ತೇನೆ, ನಿಶ್ಚಯಿಸುತ್ತೇನೆ, ಸುಖದುಃಖಗಳನ್ನು ಅನುಭವಿಸುತ್ತೇನೆ' ಎಂಬ ವ್ಯವಹಾರದಲ್ಲಿ ಮನಸ್ಸೇ ನಾನು. ಹೀಗೆ **ನಾನೆಂಬ ಪದಾರ್ಥವು ಯಾವದು? ಎಂಬ ನಿರ್ಧಾರವಿಲ್ಲದೆ ಜನರು ವ್ಯವಹರಿಸುತ್ತಿದ್ದಾರೆ.** ಇದು ಮಿಥ್ಯಾಜ್ಞಾನವು, ತಪ್ಪುತಿಳಿವಳಿಕೆಯು- ಎಂಬುದನ್ನು ತಿಳಿಸುವದಕ್ಕಾಗಿ ಶಾಸ್ತ್ರವು ಜನ್ಮಾಂತರವ್ಯವಹಾರ ವನ್ನು ಅವರ ಮನಸ್ಸಿಗೆ ಹತ್ತಿಸುತ್ತದೆ. '**ದೇಹಿನೋಽಸ್ಮಿನ್ಯಥಾ ದೇಹೇ ಕೌಮಾರಂ ಯೌವನಂ ಜರಾ । ತಥಾ ದೇಹಾನ್ತರಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ ॥**' ಒಂದು ದೇಹದಲ್ಲಿರುವಾಗಲೇ ಹೇಗೆ ಮನುಷ್ಯನಿಗೆ ಬಾಲ್ಯ, ಕೌಮಾರ, ಯೌವನ, ಮುಪ್ಪು- ಎಂಬೀ ಅವಸ್ಥೆಗಳು ಬರುತ್ತಿರುವವೋ ಹಾಗೆ ಅವನಿಗೆ ಮರಣವಾದ ಬಳಿಕ ಮತ್ತೆಯೂ ದೇಹವು ಬರುವದು ( ಗೀ. ೨-೧೩)-

ಎಂದು ಗೀತೆಯಲ್ಲಿ ಹೇಳಿರುತ್ತದೆ. ಈ ಜನ್ಮದ ಶರೀರವು ಬಾಲ್ಯವೇ ಮುಂತಾದ ಅವಸ್ಥೆಗಳಿಂದ ಮಾರ್ಪಡುತ್ತಿದ್ದರೂ ಆತ್ಮನು ಹೇಗೆ ನಿತ್ಯನಾಗಿ ಅವಿಕ್ರಿಯನಾಗಿ ಇರುತ್ತಾನೋ ಹಾಗೆಯೇ ಜನ್ಮಾಂತರದಲ್ಲಿ ಮತ್ತೊಂದು ದೇಹವನ್ನು ಪಡೆದರೂ ಆತ್ಮನು ಯಾವ ವಿಕಾರವೂ ಇಲ್ಲದೆಯೇ ಇರುತ್ತಾನೆ- ಎಂದು ತಿಳಿಸುವದೇ ಶಾಸ್ತ್ರಕ್ಕೆ ಮುಖ್ಯವಾದ ಗುರಿಯಾಗಿರುತ್ತದೆ. ಆದ್ದರಿಂದ ಈ ದೇಹಾದಿಗಳು ನಾನಲ್ಲ- ಎಂಬ ತಿಳಿವಳಿಕೆಯನ್ನು ತಂದುಕೊಡುವಮಟ್ಟಿಗೆ ತತ್ತ್ವಜಿಜ್ಞಾಸುಗಳು ಶಾಸ್ತ್ರದ ಈ ಉಪದೇಶವನ್ನು ಉಪಯೋಗಿಸಿಕೊಳ್ಳಬೇಕು.

## ೧೪. ಅಹಂಪ್ರತ್ಯಯಗಮ್ಯನಾದ ಆತ್ಮ :

'ನಾನು ದೇಹವಲ್ಲ, ಇಂದ್ರಿಯವಲ್ಲ, ಮನಸ್ಸಲ್ಲ'- ಎಂಬ ತಿಳಿವಳಿಕೆ ಬಂದರೂ 'ನಾನು ಇವುಗಳಿಗಿಂತ ಬೇರೆಯಾಗಿದ್ದುಕೊಂಡು ಇವನ್ನು ಉಪಯೋಗಿಸುತ್ತಿರುವೆನು, ನಾನು ನನ್ನನ್ನೇ ಅರಿತುಕೊಳ್ಳುವೆನು, ಇದಕ್ಕೆ ನಾನು ಎಂಬಾಕಾರದ ಅರಿವೇ ಸಾಧನವು'- ಎಂದು ವಿವೇಕಿಗಳಾದವರೂ ತಿಳಿದುಕೊಳ್ಳುತ್ತಾರೆ. ಈ ನಂಬಿಕೆಯನ್ನೇ ಇಟ್ಟುಕೊಂಡು ಕರ್ಮಶಾಸ್ತ್ರವೂ ತರ್ಕಶಾಸ್ತ್ರವೂ ಹೊರಟಿರುತ್ತವೆ. ಹೀಗೆ ನಾನು ಎಂಬ ಅರಿವಿನಿಂದ ತಿಳಿದುಬರುವ ಆತ್ಮನಿಗೆ **ಅಹಂಪ್ರತ್ಯಯಗಮ್ಯ**ನಾದ ಆತ್ಮನು ಎಂದು ಹೆಸರು. ಆದರೆ ಅಹಂಪ್ರತ್ಯಯಗಮ್ಯನಾದ ಈ ಆತ್ಮನು 'ನಾನು ಕರ್ತೃ, ಕೆಲಸಗಳನ್ನು ಮಾಡಿ ಅದರಿಂದ ಮಾರ್ಪಡುತ್ತಿರುತ್ತೇನೆ' ಎಂದುಕೊಳ್ಳುತ್ತಿರುತ್ತಾನೆ; 'ನಾನು ಭೋಕ್ತೃವು, ವಿಷಯಗಳನ್ನು ಭೋಗಿಸಿ ಸುಖದುಃಖಗಳನ್ನು ಅನುಭವಿಸುತ್ತಾ ಮಾರ್ಪಡುತ್ತಿರುತ್ತೇನೆ' ಎಂದುಕೊಳ್ಳುತ್ತಿರುತ್ತಾನೆ. 'ದೇಹಾದಿಗಳ ಮಾರ್ಪಾಡಿನಿಂದ ನಾನೂ ಮಾರ್ಪಡುತ್ತಿದ್ದೇನೆ' ಎಂದು ತಿಳಿಯುವದು ಹೇಗೆ ಸರಿಯಲ್ಲವೋ ಹಾಗೆಯೇ 'ಅಹಂಕಾರದ ಮಾರ್ಪಾಡಿನ ಸಂಬಂಧದಿಂದ ನಾನು ಮಾರ್ಪಡುತ್ತಿದ್ದೇನೆ' ಎಂದು ತಿಳಿಯುವದೂ ತಪ್ಪೇ. ಇದನ್ನು **ಶ್ರೀಕೃಷ್ಣನು ಗೀತೆಯಲ್ಲಿ** ಹೀಗೆಂದು ತಿಳಿಸಿಕೊಟ್ಟಿರುತ್ತಾನೆ : **'ಯ ಏನಂ ವೇತ್ತಿ ಹನ್ತಾರಂ ಯಶ್ಚೈನಂ ಮನ್ಯತೇ ಹತಮ್ । ಉಭೌ ತೌ ನ ವಿಜಾನೀತೋ ನಾಯಂ ಹನ್ತಿ ನ ಹನ್ಯತೇ ॥'** ನಾನು ಕೊಲ್ಲುತ್ತೇನೆ ಎಂದು

ಆತ್ಮನನ್ನು ಯಾವನು ಕೊಲ್ಲುವ ಕ್ರಿಯೆಗೆ ಕರ್ತೃವೆಂದು ತಿಳಿಯುತ್ತಾನೋ, ಯಾವನು 'ನನ್ನನ್ನು ಇವನು ಕೊಲ್ಲುವನು' ಎಂದು ಅದೇ ಕ್ರಿಯೆಗೆ ಕರ್ಮವೆಂದು ತಿಳಿಯುತ್ತಾನೋ- ಅವರಿಬ್ಬರೂ ಅರಿಯರು ; ಆತ್ಮನು ನಿಜವಾಗಿ ಕೊಲ್ಲುವದೂ ಇಲ್ಲ, ಕೊಲ್ಲಲ್ಪಡುವದೂ ಇಲ್ಲ. ಅವನು ಯಾವ ಕ್ರಿಯೆಗೂ ಕರ್ತೃವೂ ಅಲ್ಲ, ಯಾವ ಕ್ರಿಯೆಯ ಫಲವನ್ನೂ ಅನುಭವಿಸುವದೂ ಇಲ್ಲ- ಎಂಬುದನ್ನು ತಿಳಿಸುವದಕ್ಕಾಗಿ ಇಲ್ಲಿ (ಗೀ. ೨-೧೯) ಹನನ (ಕೊಲ್ಲುವದು) ಎಂಬ ಕ್ರಿಯೆಯನ್ನು ಮಾದರಿಗಾಗಿ ಉದಾಹರಿಸಿದೆ. ಮನುಷ್ಯನು ಹುಟ್ಟಿದ್ದರಿಂದ ಹಿಡಿದು ಸಾಯುವವರೆಗೆ ಯಾವದಾದರೊಂದು ವಿಕಾರವನ್ನು ಅನುಭವಿಸುತ್ತಲೇ ಇರುವೆನು- ಎಂದು ತಿಳಿದುಕೊಂಡಿರುತ್ತಾನೆ. ನಾನು ಅಹಂಪ್ರತ್ಯಯಗಮ್ಯನು ಎಂದು ತಪ್ಪಾಗಿ ತಿಳಿದುಕೊಂಡಿರುವದರ ಫಲವಿದು. ಇದು ಸರಿಯಾದ ತಿಳಿವಳಿಕೆಯಲ್ಲ, ಆತ್ಮನು ಅವಿಕ್ರಿಯನೇ- ಎಂದು ತಿಳಿಸುವದರಲ್ಲಿಯೇ ಶಾಸ್ತ್ರಕ್ಕೆ ಪರಮತಾತ್ಪರ್ಯವಿರುತ್ತದೆ.

## ೧೫. ಆತ್ಮನಿಗೆ ಕರ್ಮದಿಂದಾಗುವ ಯಾವ ಫಲವೂ ಇಲ್ಲ :

ಯಾವದಾದರೊಂದು ಕರ್ಮವನ್ನು ಮಾಡಿದರೆ ಅದರಿಂದ ಇಲ್ಲದಿದ್ದ ವಸ್ತು ಹೊಸದಾಗಿ ಉಂಟಾಗಬಹುದು ; ಇದ್ದ ವಸ್ತು ಮಾರ್ಪಡಬಹುದು ; ಮಾಡುವವನು ಕಾಲಾಂತರದಲ್ಲಿ ಅಥವಾ ದೇಶಾಂತರದಲ್ಲಿರುವ ವಸ್ತುವನ್ನು ಹೋಗಿ ಸೇರಬಹುದು ; ಅಥವಾ ಒಂದು ವಸ್ತುವಿನಲ್ಲಿರುವ ದೋಷವನ್ನು ತೆಗೆದುಹಾಕಿ ಅದರಲ್ಲಿ ಹೊಸ ಗುಣವನ್ನುಂಟುಮಾಡಬಹುದು. ಆತ್ಮನಲ್ಲಿ ಈ ನಾಲ್ಕರಲ್ಲಿ ಯಾವದೊಂದು ಬಗೆಯ ಕರ್ಮಫಲವೂ ಆಗುವಂತಿಲ್ಲ. ಅವನು ಅಹಂಪ್ರತ್ಯಯಗಮ್ಯನೆಂದು ತಿಳಿದುಕೊಂಡವರು ಮಾತ್ರವೇ ಕರ್ಮದಿಂದ ಅವನಲ್ಲಿ ಯಾವದಾದರೊಂದು ಫಲವು ಆಗುವದೆಂದು ಭಾವಿಸುವರು. ಆದ್ದರಿಂದ ಈ ಭಾವನೆಯನ್ನು ಹೊಡೆದುಹಾಕುವದಕ್ಕಾಗಿ **ಆತ್ಮನು ಕ್ರಿಯೆ, ಕಾರಕಗಳು, ಫಲ-ಇವುಗಳ ಸಂಬಂಧವೇ ಇಲ್ಲದವನು** ಎಂದು ಶಾಸ್ತ್ರದಲ್ಲಿ ತಿಳಿಸಿರುತ್ತದೆ.

೧೬. ಔಪನಿಷದಪುರುಷ :

ಅಹಂಪ್ರತ್ಯಯಗಮ್ಯನಾದ ಆತ್ಮನಿಗಿಂತಲೂ ವ್ಯತಿರಿಕ್ತನಾಗಿರುವ ಆತ್ಮನೊಬ್ಬನುಂಟು. ದೇಹಾದಿಗಳನ್ನು ನಾನು ಎಂದು ತಪ್ಪಾಗಿ ತಿಳಿದುಕೊಂಡಿದ್ದವನು ಕರ್ಮಕಾಂಡವೇ ಮುಂತಾದ ಶಾಸ್ತ್ರದ ಸಹಾಯದಿಂದ ಅವುಗಳಿಗಿಂತ ವ್ಯತಿರಿಕ್ತನಾದ ಕರ್ತೃಭೋಕ್ತೃನಾನು- ಎಂದು ಅರಿತುಕೊಳ್ಳುವಂತೆ, ಈ ಅಹಂಪ್ರತ್ಯಯಗಮ್ಯನಾಗಿರುವ ಆತ್ಮನಿಗಿಂತಲೂ ಬೇರೆಯಾದ ನನ್ನ ಪರಮಾರ್ಥಸ್ವರೂಪವೊಂದಿದೆ- ಎಂದು ಜಿಜ್ಞಾಸುವಾದವನು ಉಪನಿಷತ್ತಿನಿಂದ ಅರಿತುಕೊಳ್ಳುತ್ತಾನೆ.

ಯಾಜ್ಞವಲ್ಕ್ಯನಿಗೂ ಶಾಕಲ್ಯನಿಗೂ ನಡೆದ ಸಂವಾದದಲ್ಲಿ ಯಾಜ್ಞವಲ್ಕ್ಯನು 'तं त्वौपनिषदं पुरुषं पृच्छामि' (ಬೃ. ೩-೯-೨೬) ಆ **ಔಪನಿಷದ ಪುರುಷನು** ಯಾರು ಹೇಳು?- ಎಂದು ಕೇಳಿರುತ್ತಾನೆ. ಆ ಪುರುಷನನ್ನು ಯಾವ ಕರಣಗಳಿಂದಲೂ ಗ್ರಹಿಸುವದಕ್ಕೆ ಆಗುವದಿಲ್ಲ, ಅವನು ಎಂದಿಗೂ ಸವೆಯುವದಿಲ್ಲ, ಅವನಿಗೆ ಏತರ ಸೊಂಕೂ ಇರುವದಿಲ್ಲ, ಏತರ ಬಂಧವೂ ಇರುವದಿಲ್ಲ, ಅವನು ಏತರಿಂದಲೂ ನಾಶವಾಗುವದಿಲ್ಲ- ಎಂದು ಅಲ್ಲಿ ವರ್ಣಿಸಿರುತ್ತದೆ. ಆ ಪುರುಷನನ್ನು 'नेति नेत्यात्मा' ಹೀಗಿಲ್ಲ, ಹೀಗಿಲ್ಲ ಎಂದು ವರ್ಣಿಸಬೇಕಾದ ಆತ್ಮನು- ಎಂದು ತಿಳಿಸಿಕೊಟ್ಟಿರುತ್ತದೆ. ಹೀಗೆ ಯಾವ ಕರ್ಮದ ಸಂಬಂಧವೂ ಇಲ್ಲದೆ ಅಹಂಪ್ರತ್ಯಯಗಮ್ಯನೂ ಅಲ್ಲದೆ ಇರುವ ಆತ್ಮನೇ **ಔಪನಿಷದಪುರುಷನು.** ಉಪನಿಷತ್ತಿನಿಂದಲ್ಲದೆ ಮತ್ತೆ ಹೇಗೂ ಈ ಆತ್ಮನನ್ನು ಅರಿತುಕೊಳ್ಳುವದಕ್ಕೆ ಆಗುವದೇ ಇಲ್ಲ.

೧೭. ಸಾಕ್ಷಿಸ್ವರೂಪ :

ಉಪನಿಷತ್ತುಗಳಲ್ಲಿ ಹೇಳಿರುವ ಈ ಪುರುಷನು ಇದಾನೆಂಬುದಕ್ಕೆ ಪ್ರಮಾಣ ವೇನು? ಶಾಸ್ತ್ರದಲ್ಲಿ ಹೇಳಿದೆಯೆಂಬ ಕಾರಣದಿಂದಲೇ ಹೀಗೆಂದು ಒಪ್ಪಬೇಕೆ?- ಎಂದು ಯಾರಾದರೂ ಕೇಳಬಹುದು. ಶಾಸ್ತ್ರವು ಶಾಸ್ತ್ರವೆಂಬ ಕಾರಣದಿಂದ ಅದನ್ನು

ನಂಬಬೇಕಾದ ನಿರ್ಬಂಧವೇನೂ ಇಲ್ಲಿಲ್ಲ. ನಮಗೆ ಮತ್ತೊಂದು ಪ್ರಮಾಣದಿಂದ ಅರಿಯುವದಕ್ಕೆ ಆಗಲಾರದ ವಿಷಯವನ್ನು ತಿಳಿಸಿಕೊಡುವದರಿಂದಲೇ ಶಾಸ್ತ್ರವು ಪ್ರಮಾಣವಾಗಿರುತ್ತದೆ. ನಮಗೆ ಆತ್ಮನು ಇದಾನೆಂಬುದಕ್ಕೆ ಯಾವ ಪ್ರಮಾಣವೂ ಬೇಡ; ಏಕೆಂದರೆ ಆತ್ಮನೆಂದರೆ ತನ್ನ ಸ್ವರೂಪವು. ತಾನು ಇಲ್ಲ- ಎಂದು ಯಾರೂ ತಿಳಿದುಕೊಳ್ಳುವಂತೆಯೇ ಇಲ್ಲ. ಏಕೆಂದರೆ 'ನಾನು ಇಲ್ಲ' ಎಂದು ಯಾರಾದರೂ ತನ್ನನ್ನು ಅಲ್ಲಗಳೆದರೆ ಹಾಗೆ ಅಲ್ಲಗಳೆಯುವವನೇ ತಾನಾಗುತ್ತಾನೆ. ಇನ್ನು ನಾನು ಅಹಂಪ್ರತ್ಯಯಗಮ್ಯನೊ, ಅಲ್ಲವೊ ? ಎಂಬುದನ್ನು ವಿಚಾರಿಸಬೇಕಷ್ಟೆ? ಅಹಂಪ್ರತ್ಯಯವು- ಎಂದರೆ ನಾನು ಎಂಬ ಅಂತಃಕರಣವೃತ್ತಿಯು- ಇರಲಿ, ಇಲ್ಲದಿರಲಿ, ನಮ್ಮ ಸ್ವರೂಪವು ಇದ್ದೇ ಇರುತ್ತದೆ- ಎಂಬುದು ನಮಗೆಲ್ಲ ಅನುಭವದಲ್ಲಿರುತ್ತದೆ. 'ಇದು ಅಹಂಪ್ರತ್ಯಯವು' ಎಂಬ ಜ್ಞಾನವುಂಟಾಗುವದಕ್ಕೆ ಮುಂಚೆಯೇ ನಮಗೆ ಅದು ಅನುಭವಕ್ಕೆ ಬಂದಿರಬೇಕಷ್ಟೆ? ಯಾವ ನಮಗೆ ಅದು ಅನುಭವಕ್ಕೆ ಬರುತ್ತದೆಯೋ ಅದೇ ನಮ್ಮ ನಿಜವಾದ ಆತ್ಮನು, ಅದೇ ಔಪನಿಷದಪುರುಷನು.

ಅಹಂಪ್ರತ್ಯಯಗಮ್ಯವಾದ ಆತ್ಮಸ್ವರೂಪವು ಏನನ್ನು ಅರಿಯಬೇಕಾದರೂ ಅದಕ್ಕೊಂದು ಸಾಧನವು ಬೇಕು. ಆ ಆತ್ಮನು ತನ್ನನ್ನು ತಾನು ಅಹಂಪ್ರತ್ಯಯದಿಂದಲೇ, 'ನಾನು' ಎಂಬ ಅರಿವಿನಿಂದಲೇ, ಅರಿತುಕೊಳ್ಳುತ್ತಾನೆ; ಮಿಕ್ಕದ್ದೆಲ್ಲವನ್ನೂ 'ಇದು ಇಂಥದ್ದು' ಎಂಬ ರೂಪದಿಂದ ಅರಿಯುವದಕ್ಕೆ ಇಂದ್ರಿಯಗಳನ್ನೋ ಮನಸ್ಸನ್ನೋ ಉಪಯೋಗಿಸಿಕೊಂಡು ಅರಿಯುತ್ತಾನೆ. ಇಂದ್ರಿಯಗಳಿಂದ ಅರಿಯುವದು **ಪ್ರತ್ಯಕ್ಷಜ್ಞಾನವು;** ಆದ್ದರಿಂದ ಇಂದ್ರಿಯಗಳಿಗೆ **ಪ್ರತ್ಯಕ್ಷಪ್ರಮಾಣವು** ಎಂದು ಹೆಸರು. ಹೀಗೆಯೇ ಇಂದ್ರಿಯಗಳಿಂದ ಏನನ್ನಾದರೂ ಹೆಗ್ಗುರುತನ್ನು ಕಂಡುಕೊಂಡು ಅದರ ಬಲದಿಂದ ಊಹಿಸುವುದು **ಅನುಮಾನಜ್ಞಾನವು;** ಆದ್ದರಿಂದ ಹಾಗೆ ಊಹಿಸುವದಕ್ಕೆ ಸಾಧನವಾದ ಪರಾಮರ್ಶರೂಪವಾದ ಮನಸ್ಸಿಗೆ **ಅನುಮಾನ ಪ್ರಮಾಣ**ವೆಂದು ಹೆಸರು. ಪ್ರತ್ಯಕ್ಷವನ್ನು ಆಶ್ರಯಿಸಿಕೊಂಡು ಹೊರಟಿರುವ ಇನ್ನೊ

ಕೆಲವು ಪ್ರಮಾಣಗಳು ಉಂಟು. ಅಹಂಪ್ರತ್ಯಯಗಮ್ಯನಾದ ಆತ್ಮನು ಪ್ರತ್ಯಕ್ಷಾದಿ ಪ್ರಮಾಣಗಳಿಂದ ವಿಷಯಗಳನ್ನು ಅರಿಯುವಾಗಲೆಲ್ಲ ಅವನಲ್ಲಿ ಯಾವದೋ ಒಂದು ಮಾರ್ಪಾಡು ಆಗುತ್ತದೆ. ಆದರೆ ಔಪನಿಷದಪುರುಷನಾದ ನಮ್ಮ ನಿಜವಾದ ಆತ್ಮನು ಅರಿಯುವಾಗ ಅವನಿಗೆ ಯಾವ ಸಾಧನಗಳೂ ಬೇಕಿರುವದಿಲ್ಲ, ಆಗ ಅವನಲ್ಲಿ ಯಾವ ಮಾರ್ಪಾಡೂ ಆಗುವದಿಲ್ಲ. ಹೀಗೆ ಕರಣಗಳ ಅಪೇಕ್ಷೆಯಿಲ್ಲದೆ ನೇರಾಗಿ ತನ್ನಲ್ಲಿ ಯಾವ ಮಾರ್ಪಾಡುಗಳನ್ನೂ ಮಾಡಿಕೊಳ್ಳದೆಯೇ ಅರಿಯುತ್ತಿರುವದರಿಂದ ಔಪನಿಷದಪುರುಷನಾದ ಈ ಆತ್ಮನಿಗೆ **ಸಾಕ್ಷಿ** ಎಂಬ ಹೆಸರನ್ನು ಕೊಟ್ಟಿರುತ್ತಾರೆ.

# ೫. ಮುಖ್ಯಾತ್ಮ

## ೧೮. ಸಾಕ್ಷಿಯೇ ಮುಖ್ಯಾತ್ಮನು :

ದೇಹಾದಿಗಳಲ್ಲಿ ನಾನು ಎಂಬ ಭ್ರಾಂತಿಯಿರುತ್ತದೆಯಷ್ಟೆ? ಹೀಗೆ ಭ್ರಾಂತಿಗೆ ವಿಷಯನಾಗಿರುವ ಆತ್ಮನನ್ನು ವೇದಾಂತಿಗಳು **ಮಿಥ್ಯಾತ್ಮ** ಎನ್ನುತ್ತಾರೆ. ಈ ಮಿಥ್ಯಾತ್ಮನಿಗೆ ದೇಹದ ಸಂಬಂಧದಿಂದ ಹೆಂಡತಿ, ಮಕ್ಕಳು ಮುಂತಾದವರಲ್ಲಿ ನನ್ನದೆಂಬ ಬುದ್ಧಿಯುಂಟಾಗಿ ಮಿತಿಮೀರಿದ ಅಭಿಮಾನವು ತಲೆದೋರಿಕೊಂಡಾಗ; ಅವನಿಗೆ ಆದ ಹೆಚ್ಚೂ ಕುಂದೂ ತನಗೇ ಆದಂತೆ ಎಂದು ಭಾವಿಸಿಕೊಳ್ಳುತ್ತಾನಷ್ಟೆ? ಹೀಗೆ ನಾನು ಎಂಬ ಬುದ್ಧಿಗೆ ವಿಷಯವಾಗಿ ನಮಗಿಂತ ಬೇರೆಯಾಗಿಯೇ ಇರುವ ಹೊರಗಿನ ಹೆಂಡತಿ, ಮಕ್ಕಳು- ಮುಂತಾದ ವಸ್ತುವಿಗೆ ವೇದಾಂತಿಗಳು **ಗೌಣಾತ್ಮ** ಎಂಬ ಹೆಸರನ್ನು ಕೊಟ್ಟಿರುತ್ತಾರೆ. ಗೌಣಾತ್ಮನೆಂದರೆ ತನಗಿಂತ ಬೇರೆಯೆಂದು ತಿಳಿಯಬರುತ್ತಿದ್ದರೂ ತನ್ನ ಗುಣವನ್ನು ಅದರಲ್ಲಿ ಹುಟ್ಟುಹಾಕಿಕೊಂಡು ಆಗುವ ನಾನು ಎಂಬ ಬುದ್ಧಿಗೆ ವಿಷಯನಾದ ಆತ್ಮ ; ಮಿಥ್ಯಾತ್ಮ ಎಂದರೆ ಭ್ರಾಂತಿಯಿಂದ ನಾನು ಎಂದು ಕಲ್ಪಿಸಿಕೊಂಡ ಆತ್ಮ. ಗೌಣಾತ್ಮನನ್ನು ನಾನು ಎಂದೂ, ನನ್ನವರು ಎಂದೂ- ಎರಡು ಬಗೆಯಾಗಿಯೂ ವಿಂಗಡಿಸಿ ತಿಳಿದುಕೊಳ್ಳುವದಕ್ಕೆ ಬರುತ್ತದೆ; ಆದರೆ ಮಿಥ್ಯಾತ್ಮನನ್ನು ಹೀಗೆ ವಿಂಗಡಿಸಿ ತಿಳಿದುಕೊಳ್ಳುವದಕ್ಕೆ ಬರುವದೇ ಇಲ್ಲ. ಇದು ನಾನು, ಇದು ದೇಹ- ಎಂದು ವಿಂಗಡಿಸಿಕೊಂಡು ಯಾರೂ ಬೇರೆ ಬೇರೆಯಾಗಿ ತಿಳಿದುಕೊಳ್ಳುವದಕ್ಕೆ ಆಗುವದೇ ಇಲ್ಲ. ಆದ್ದರಿಂದ ದೇಹಾದಿಗಳಲ್ಲಿರುವ ಆತ್ಮಬುದ್ಧಿಯು ಮಿಥ್ಯಾಬುದ್ಧಿಯು, ಆ ಬುದ್ಧಿಗೆ ವಿಷಯವಾಗಿ ತೋರುತ್ತಿರುವದರಿಂದ ದೇಹಾದಿಗಳು ಮಿಥ್ಯಾತ್ಮಗಳು. ಶಾಸ್ತ್ರದಲ್ಲಿ ದೇಹಾದಿಗಳಿಂದ ಬೇರೆಯಾದವನೆಂದು ಒಪ್ಪಿಕೊಂಡಿರುವ ಧರ್ಮಾಧರ್ಮಗಳ ಸಂಬಂಧವುಳ್ಳ ಆತ್ಮನೂ ಮಿಥ್ಯಾತ್ಮನೇ. ಅವನಿಗೇ ಧರ್ಮಾಧರ್ಮಾದಿಗಳ ಫಲವನ್ನು ಶಾಸ್ತ್ರದಲ್ಲಿ ತಿಳಿಸಿರುವದು. ಈ ಆತ್ಮರುಗಳೆಲ್ಲಕ್ಕಿಂತಲೂ ಬೇರೆಯಾಗಿರುವ ಸಾಕ್ಷಿಯೇ ನಿಜವಾದ ಆತ್ಮ ; ಆ ಆತ್ಮಸ್ವರೂಪವನ್ನೇ ನಾವು ನಾನು ಎಂಬ ಬುದ್ಧಿಯಿಂದ

ಗುರುತಿಸಿಕೊಳ್ಳಬೇಕಾದದ್ದು. ಅವನ ಸ್ವರೂಪವನ್ನು ತಿಳಿಸಿಕೊಡುವದಕ್ಕಾಗಿಯೇ ವೇದಾಂತಶಾಸ್ತ್ರವು ಹೊರಟಿರುವದು. ಅವನ್ನು **ಮುಖ್ಯಾತ್ಮ** ಎಂದು ವೇದಾಂತದಲ್ಲಿ ಕರೆದಿರುತ್ತದೆ.

೧೯. ಸಾಕ್ಷಿಯ ಅರಿವಿನ ಸ್ವಭಾವ :

ಮುಖ್ಯಾತ್ಮನಾದ ಸಾಕ್ಷಿಯು ಎಲ್ಲವನ್ನೂ ಅರಿಯುತ್ತಾನೆ ; ಅವನನ್ನು ಅರಿಯುವ ಶಕ್ತಿಯುಳ್ಳ ಮತ್ತೊಂದು ಯಾವದೂ ಇರುವದಿಲ್ಲ. ಸಾಕ್ಷಿಯು ಅರಿತುಕೊಳ್ಳುವದು ಎಂದರೆ ಕರಣಗಳಿಂದಲ್ಲ ; ಆ ಅರಿವಿನಿಂದ ಯಾವ ಮಾರ್ಪಾಡೂ ಸಾಕ್ಷಿಯಲ್ಲಿ ಆಗುವದೂ ಇಲ್ಲ. 'ಸೂರ್ಯನು ಭೂಲೋಕವನ್ನೆಲ್ಲ ಬೆಳಗುತ್ತಾನೆ' ಎಂಬಲ್ಲಿ ಸೂರ್ಯನಲ್ಲಿ ಯಾವ ಮಾರ್ಪಾಡೂ ಆಗುವದೇ ಇಲ್ಲ, ಜನರು ಹೊರಗಿನ ವಸ್ತುಗಳನ್ನು ಇಂಥವು ಎಂದು ಕಣ್ಣಿನ ಮೂಲಕವಾಗಿ ಅರಿಯುವಾಗ ಅವರಿಗೆ ಬೆಳಕಿನ ಸಹಾಯವು ಬೇಕಾಗುವಂತೆ ಸೂರ್ಯನಿಗೆ ವಸ್ತುಗಳನ್ನು ಬೆಳಗುವದಕ್ಕೆ ಮತ್ತೆಯಾವದರ ಸಹಾಯವೂ ಬೇಕಾಗುವದಿಲ್ಲ. ಅಲ್ಲವೆ? ಅದರಂತೆಯೇ ಸಾಕ್ಷಿಯು ಹೊರಗಿನ ಅನಾತ್ಮವಾದ ವಿಷಯಗಳನ್ನು ಅರಿಯುತ್ತಾನೆ- ಎಂಬಲ್ಲಿಯೂ ತಿಳಿಯಬೇಕು. ಆಗ ಸಾಕ್ಷಿಯಲ್ಲಿ ಯಾವ ಮಾರ್ಪಾಡೂ ಆಗುವದಿಲ್ಲ, ಅವನಿಗೆ ಯಾವ ಕರಣದ ಸಹಾಯವೂ ಬೇಕಿರುವದೂ ಇಲ್ಲ. ಅವನು ನೇರಾಗಿಯೇ ವಸ್ತುಗಳನ್ನು ಅರಿಯುತ್ತಾನೆ. ಇದನ್ನು ಹಿಂದಿನ ಖಂಡದಲ್ಲಿಯೇ ತಿಳಿಸಿರುತ್ತೇವೆ.

ಅಹಂಪ್ರತ್ಯಯಗಮ್ಯನಾದ ಆತ್ಮನು ದೇಹ, ಇಂದ್ರಿಯಗಳು, ಮನಸ್ಸು- ಇವುಗಳ ಮೂಲಕವಾಗಿ ಹೊರಗಿನ ವಿಷಯಗಳನ್ನು ಅರಿಯುತ್ತಾನಷ್ಟೆ? ಆಗ ಹೊರಗಿನ ವಿಷಯಗಳೆಲ್ಲ ದೇಶಕಾಲಗಳಲ್ಲಿಯೇ ತೋರುತ್ತಿರುತ್ತವೆ. 'ಇದು ಈಗ ಇಲ್ಲಿದೆ, ಆಗ ಅಲ್ಲಿತ್ತು'- ಎಂಬ ರೂಪದಿಂದಲೇ ಮಿಥ್ಯಾತ್ಮನು ವಿಷಯಗಳನ್ನು ಅರಿಯುತ್ತಾನೆ. ಆದರೆ ಸಾಕ್ಷಿಗೆ ಈ ದೇಶಕಾಲಗಳ ನೆರವೂ ಬೇಕಿಲ್ಲ. ಅವನು ಅವುಗಳ ಹಂಗು ಇಲ್ಲದೆಯೇ ಎಲ್ಲವನ್ನೂ ತನ್ನ ಅರಿವಿಗೆ ವಿಷಯವಾಗಿ ಮಾಡಿಕೊಳ್ಳುತ್ತಾನೆ **ದೇಶಕಾಲಗಳನ್ನು ಕೂಡ ಮತ್ತೇತರ ಹಂಗೂ**

**ಇಲ್ಲದೆಯೇ ಸಾಕ್ಷಿಯು ನೇರಾಗಿ ವಿಷಯವಾಗಿ ಮಾಡಿಕೊಂಡು ಅರಿಯುತ್ತಾನೆ.**

೨೦. ಸಾಕ್ಷಿಯು ಏತಕ್ಕೂ ವಿಷಯನಲ್ಲ :

ಸಾಕ್ಷಿಯು ಅಂತಃಕರಣದ ಹಂಗಿಲ್ಲದೆ ಎಲ್ಲವನ್ನೂ ತನ್ನ ಅರಿವಿನ ಬೆಳಕಿನಿಂದಲೇ ನೇರಾಗಿ ಅರಿಯುತ್ತಿರುತ್ತಾನೆಂದು ಆಗಲೆ ಹೇಳಿದ್ದಾಗಿದೆ. ಅಂತಃಕರಣದಲ್ಲಿ ಆಗುವ ಎಲ್ಲಾ ವೃತ್ತಿಗಳೂ ಒಮ್ಮೆಗೇ ಅವನ ಅರಿವಿನ ಬೆಳಕಿಗೆ ವಿಷಯವಾಗುತ್ತವೆ- ಎಂಬುದು ಸಾಕ್ಷಿಯ ಮತ್ತೊಂದು ಸ್ವಭಾವವಿಶೇಷವು. ಸೂರ್ಯನು ಭೂಮಿಯಲ್ಲಿರುವ ವಸ್ತುಗಳನ್ನು ಬೆಳಗುವಾಗ ಅವುಗಳನ್ನು ಒಂದೊಂದಾಗಿ ಬೆಳಗುವದಿಲ್ಲ ; ಎಲ್ಲವನ್ನೂ ಒಟ್ಟಿಗೆ ಬೆಳಗುತ್ತಾನೆ. ಅಲ್ಲವೆ? ಸಾಕ್ಷಿಯು ಅರಿಯುವದೂ ಹಾಗೆಯೇ. ಎಲ್ಲೆಲ್ಲಿ ಕರ್ತೃವು ಸ್ವಪ್ರಯತ್ನದಿಂದ ವಸ್ತುಗಳನ್ನು ಅರಿಯಬೇಕಾಗುತ್ತದೆಯೋ ಅಲ್ಲೆಲ್ಲ ಆ ಪ್ರಯತ್ನದಿಂದಾಗುವ ಕ್ರಿಯೆಗಳು ಒಂದೊಂದಾಗಿ ಹುಟ್ಟಿಹೋಗುತ್ತಿರುವವಾದ್ದರಿಂದ ಎಲ್ಲಾ ವಿಷಯಗಳನ್ನೂ ಒಟ್ಟಿಗೆ ಅರಿಯುವದು ಅವನಿಂದ ಆಗಲಾರದು. ಆದರೆ ಎಲ್ಲಿ ಅರಿವು ಅರಿಯುವವನ ಸ್ವಭಾವವೇ ಆಗಿರುತ್ತದೆಯೋ ಅಲ್ಲಿ ಬೆಳಕಿನ ಸ್ವಭಾವವುಳ್ಳ ಸೂರ್ಯನಂತೆ ಯಾವ ಸ್ವಪ್ರಯತ್ನವೂ ಇಲ್ಲದೆಯೇ ವಿಷಯವೆಲ್ಲವನ್ನೂ ಒಟ್ಟಿಗೆ ತನ್ನ ಅರಿವಿನ ಬೆಳಕಿನಿಂದ ಬೆಳಗಬಹುದು. ಹೀಗೆ ಅಹಂಪ್ರತ್ಯಯಗಮ್ಯನಾದ ಆತ್ಮನು ಕ್ರಮಕ್ರಮವಾಗಿ ವಸ್ತುಗಳನ್ನು ಅರಿಯುತ್ತಾನೆ, ಮುಖ್ಯಾತ್ಮನು ಒಟ್ಟಿಗೆ ಅರಿಯುತ್ತಾನೆ- ಎಂಬ ವಿಶೇಷವನ್ನು ತೋರಿಸುವದಕ್ಕಾಗಿ ಅಹಂಪ್ರತ್ಯಯಿಯನ್ನು **ವಿಷಯಿ**ಯೆಂದೂ ಅವನು ಅರಿಯುವ ವಸ್ತುಗಳನ್ನು **ವಿಷಯ**ಗಳೆಂದೂ ಕರೆದು ಮುಖ್ಯಾತ್ಮನನ್ನು **ಸಾಕ್ಷಿ**ಯೆಂದೂ ಅವನ ಅರಿವಿನಿಂದ ತೋರಿಬರುವದನ್ನೆಲ್ಲ **ಸಾಕ್ಷ್ಯ**ವೆಂದೂ ಕರೆಯಬಹುದಾಗಿದೆ. ಸಾಕ್ಷಿಯೂ ಸಾಕ್ಷ್ಯಕ್ಕೆ ವಿಷಯಿಯೇ ಆದರೂ ವಿಷಯಿತ್ವವೆಂಬ ಧರ್ಮವು ಬೇರೆಯಾಗಿ ಅವನಲ್ಲಿರುವದಿಲ್ಲ. ಅವನು ಚಿದಾತ್ಮಕನಾಗಿರುತ್ತಾನೆ. 'ಅಹಂ ಪ್ರತ್ಯಯಗಮ್ಯನಾದ ಆತ್ಮನು ಇವನು' ಎಂಬುದನ್ನುಕೂಡ ಸಾಕ್ಷಿಯು ಬೆಳಗಿ ತೋರಿಸುತ್ತಾನೆ ; ಅಹಂಪ್ರತ್ಯಯಕ್ಕೆ ಅವನು

ವಿಷಯನೆಂಬುದನ್ನೂ ಸಾಕ್ಷಿಯ ಬೆಳಕಿನಿಂದಲೇ ನಾವು ಅರಿಯುತ್ತೇವೆ. ಆದರೆ ಹೀಗೆ ಸಾಕ್ಷಿಯು ಮತ್ತೇತಕ್ಕೂ ವಿಷಯನಾಗಿರುವದಿಲ್ಲ; ಅವನು **ಅವಿಷಯನಾದ ವಿಷಯಿಯು.**

## ೨೧. ಸಾಕ್ಷಿಯು ಸ್ವಯಂಜ್ಯೋತಿಯು :

ಹೀಗೆ ಮುಖ್ಯಾತ್ಮನಾದ ಸಾಕ್ಷಿಯು ತನ್ನ ಬೆಳಕಿನಿಂದ ಎಲ್ಲವನ್ನೂ ಬೆಳಗುತ್ತಿರುವಾಗ ತನ್ನಲ್ಲಿ ಯಾವದೊಂದು ಮಾರ್ಪಾಡೂ ಇಲ್ಲದೆ, ತಾನು ಬೆಳಗಿ ತೋರುವ ಯಾವ ವಸ್ತುವಿನ ಸೋಂಕೂ ಇಲ್ಲದೆ ಇರುವದರಿಂದ ಅವನು **ಅಸಂಗ**ನಾಗಿರುತ್ತಾನೆ. ಆತ್ಮನ ಬೆಳಕಿನಿಂದಲೇ ಎಲ್ಲವೂ ಕಾಣಿಸುತ್ತಿರುತ್ತದೆ. ಎಲ್ಲವೂ ಆತನ ಬೆಳಕಿನ ಸನ್ನಿಧಿಯಲ್ಲಿಯೇ ಇದ್ದುಕೊಂಡು ತನ್ನ ವ್ಯಾಪಾರವನ್ನು ಮಾಡುತ್ತಿರುತ್ತದೆ. ಜನಕಯಾಜ್ಞವಲ್ಕ್ಯಸಂವಾದದಲ್ಲಿ ಒಂದು ವಾಕ್ಯವಿರುತ್ತದೆ: 'अस्तमित आदित्ये याज्ञवल्क्य चन्द्रमास्यस्तमिते शान्तेऽग्नौ शान्तायां वाचि किंज्योतिरेवायं पुरुष इत्यात्मैवास्य ज्योतिर्भवतीत्यात्मनैवायं ज्योतिषाऽऽस्ते पल्ययते कर्म कुरुते विपल्येतीति' ಯಾವ ಬೆಳಕೂ ಇಲ್ಲದಾಗ ಈ ಮನುಷ್ಯನು ಏತರ ಬಲದಿಂದ ವ್ಯವಹರಿಸುತ್ತಾನೆ ?- ಎಂಬುದು ಜನಕನ ಪ್ರಶ್ನೆ. ಸೂರ್ಯಚಂದ್ರರ ಬೆಳಕಿನಲ್ಲಿ ನಾವೆಲ್ಲರೂ ವ್ಯವಹಾರಮಾಡುತ್ತಿರುತ್ತೇವೆ. ಸೂರ್ಯನು ಮುಳುಗಿದಾಗ ಚಂದ್ರನೂ ಇಲ್ಲದಾಗ ಬೆಂಕಿಯ ಬೆಳಕು ಸಾಧನವಾಗಿರುತ್ತದೆ. ಹೊರಗಿನ ಯಾವ ಬೆಳಕೂ ಇಲ್ಲದಿದ್ದಾಗ ಹೊರಗಿನ ಶಬ್ದವೇ ಮುಂತಾದವುಗಳು ವ್ಯವಹಾರಕ್ಕೆ ಸಹಾಯಕ ವಾಗುತ್ತವೆ. ಆದರೆ ಈ ಯಾವ ಸಾಧನವೂ ಇಲ್ಲದಿದ್ದರೂ ಈ ನಮ್ಮ ದೇಹೇಂದ್ರಿಯಗಳ ಸಮೂಹವು ಯಾವ ಬೆಳಕಿನ ಸಹಾಯದಿಂದ ತನ್ನ ವ್ಯಾಪಾರವನ್ನು ಸಾಗಿಸುತ್ತಿರುತ್ತದೆ?- ಎಂದು ಜನಕನು ಕೇಳಿರುತ್ತಾನೆ. ಇದಕ್ಕೆ ಯಾಜ್ಞವಲ್ಕ್ಯನು ಕೊಟ್ಟಿರುವ ಉತ್ತರವೇನೆಂದರೆ : ಆತ್ಮನೇ ಇದೆಲ್ಲಕ್ಕೂ ಬೆಳಕು. ಅವನ ಬೆಳಕಿನಿಂದಲೇ ನಮ್ಮ ದೇಹವೂ ಇಂದ್ರಿಯಗಳೂ ಮನಸ್ಸೂ ಬೆಳಗುತ್ತವೆ, ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತವೆ (ಬೃ.೪-೩-೬). ಆದ್ದರಿಂದ ಆತ್ಮನು **ಸ್ವಯಂಜ್ಯೋತಿಯು,** ತಾನುತಾನೇ ಬೆಳಗುವವನು- ಎನ್ನಬೇಕು.

## ೨೨. ಮುಖ್ಯಾತ್ಮನು ಒಬ್ಬನೇ :

ಮುಖ್ಯಾತ್ಮನು ಅರಿವಿನ ಸ್ವರೂಪವೇ ಆಗಿರುವದರಿಂದ ಸ್ವಯಂಪ್ರಕಾಶನಾಗಿರುತ್ತಾನೆ. ಅವನನ್ನು ಸಿದ್ಧಮಾಡಿಕೊಡುವದಕ್ಕೆ ಯಾವ ಪ್ರಕಾಶವೂ ಬೇಕಿಲ್ಲ ಎಂದಾಯಿತಷ್ಟೆ? ಈ ಆತ್ಮನು ಒಬ್ಬನೊ, ಅಥವಾ ಒಂದೊಂದು ದೇಹಕ್ಕೆ ಒಬ್ಬನಂತೆ ಇಂಥ ಅನೇಕ ಆತ್ಮರು ಇರುವರೊ? ಸಾಂಖ್ಯರೇ ಮೊದಲಾದವರೂ ಆತ್ಮನಿಗೆ ಶರೀರಾದಿಗಳ ಸಂಗವು ಇಲ್ಲವೆಂಬುದನ್ನು ಒಪ್ಪಿರುತ್ತಾರಾದಾರೂ ಅವರು ಒಂದೊಂದು ಶರೀರಕ್ಕೆ ಒಬ್ಬೊಬ್ಬ ಆತ್ಮನು ಇರುತ್ತಾನೆ- ಎನ್ನುತ್ತಾರೆ. ಅವರದು ಸರಿಯಾದ ತಿಳಿವಳಿಕೆಯಲ್ಲವೆಂಬುದನ್ನು ಅನುಭವಾನುಸಾರಿಯಾದ ಯುಕ್ತಿಯಿಂದ ಹೀಗೆ ತೋರಿಸಿಕೊಡಬಹುದು : ಆತ್ಮನು ಈವರೆಗೆ ನಾವು ವಿವರಿಸಿರುವಂತೆ ಸ್ವಯಂಪ್ರಕಾಶನಾದ ಸಾಕ್ಷಿಯಾಗಿರುತ್ತಾನೆ, ಏತಕ್ಕೂ ವಿಷಯನಾಗಿರುವದಿಲ್ಲ. ಹೀಗಿರುವಲ್ಲಿ ಇವನನ್ನು ಒಂದು, ಎರಡು- ಎಂದು ಎಣಿಸುವದು ಹೇಗೆ ಸರಿಯಾದೀತು? ಒಂದು, ಎರಡು- ಎಂಬ ಸಂಖ್ಯೆಯು ಕಾಲದಲ್ಲಾಗಲಿ ದೇಶದಲ್ಲಾಗಲಿ ಇರುವ ವಸ್ತುಗಳಿಗೆ ಅನ್ವಯಿಸುತ್ತದೆ. ಕಾಲದಲ್ಲಿ ಆಗುವ ಘಟನೆಗಳು ಒಂದರ ಹಿಂದೊಂದು ಆಗುತ್ತಿರುವದರಿಂದ ಅವನ್ನು ಎಣಿಸುವದಕ್ಕೆ ಬರುತ್ತದೆ ; ಹೀಗೆಯೇ ಹೊರಗಿನ ವಸ್ತುಗಳು ದೇಶದಲ್ಲಿ ಒಂದರ ಪಕ್ಕದಲ್ಲಿ ಮತ್ತೊಂದು ಇರಬಹುದಾದ್ದರಿಂದ ಅವನ್ನೂ ಎಣಿಸುವದಕ್ಕೆ ಬರುತ್ತದೆ. ಆದರೆ ಕಾಲಾಕಾಶಗಳನ್ನು ಕೂಡ ತನ್ನ ಅರಿವಿನಿಂದ ಬೆಳಗುತ್ತಿರುವ ಸಾಕ್ಷಿಯು ಅವುಗಳ ಆಧಾರದಿಂದ ಇರುತ್ತಾನೆಂದು ಒಪ್ಪುವದಕ್ಕೆ ಆಗುವಂತಿಲ್ಲ. ಕಾಲಾಕಾಶಗಳೇ ಆ ಬೆಳಕಿನಿಂದ ತೋರಿಕೊಂಡು ಬೆಳಗಬೇಕಾಗಿರುವದರಿಂದ ಒಂದು ಬಗೆಯಲ್ಲಿ ಅವಕ್ಕೆ ಅವನೇ ಆಧಾರನೆಂದು ಹೇಳಬಹುದು. ಆದ್ದರಿಂದ ಸಾಕ್ಷಿರೂಪನಾದ ಆತ್ಮನಲ್ಲಿ ಸಂಖ್ಯೆಯೇ ಇಲ್ಲ. ಅವನು ತನಗೆರಡನೆಯದಿಲ್ಲದ ಒಬ್ಬನೇ ಆಗಿರುತ್ತಾನೆ ಎಂದು ಒಪ್ಪಬೇಕು.

## ೨೩. ಎಲ್ಲಾ ಪ್ರಾಣಿಗಳಲ್ಲಿಯೂ ಒಬ್ಬನೇ ಆತ್ಮನಿರುತ್ತಾನೆ :

ಒಂದೊಂದು ಶರೀರಕ್ಕೆ ಒಬ್ಬೊಬ್ಬ ಆತ್ಮನಿರುತ್ತಾನೆಂಬುದೇ ಸರಿಯೆಂದು

ಮೇಲೆಮೇಲೆ ನೋಡಿದರೆ ತೋರುತ್ತದೆ. ನಾನು, ನೀನು, ಇವನು, ಅವನು, ಅವರು, ಆ ಪ್ರಾಣಿಗಳು- ಎಂದೀ ಬಗೆಯಲ್ಲಿ ಪ್ರಪಂಚದಲ್ಲಿ ಮನುಷ್ಯರೂ ಮಿಕ್ಕ ಸ್ಥಾವರಜಂಗಮಪ್ರಾಣಿಗಳೂ ತೋರುತ್ತಿರುವವು. ಅವುಗಳಿಗೆಲ್ಲ ಒಬ್ಬೊಬ್ಬ ಬೇರೆಬೇರೆಯ ಆತ್ಮನು ಇರುವಂತೆ ವ್ಯವಹಾರದಲ್ಲಿ ನಮಗೆ ತೋರುತ್ತಿರುತ್ತದೆ. ಏಕೆಂದರೆ ಒಬ್ಬೊಬ್ಬ ಮನುಷ್ಯನ ಇಷ್ಟಾನಿಷ್ಟಗಳೂ ಬೇರೆಬೇರೆಯಾಗಿರುತ್ತವೆ ; ಒಂದೊಂದು ಪ್ರಾಣಿಯ ಇಷ್ಟಾನಿಷ್ಟಗಳೂ ಬೇರೆಬೇರೆಯಾಗಿರುತ್ತವೆ. ಆ ಇಷ್ಟಾನಿಷ್ಟಗಳಿಂದ ಅವರವರಿಗೆ ಬೇರೆಬೇರೆಯಾಗಿ ಸುಖದುಃಖಗಳು ಆಗುತ್ತಿರುವಂತೆ ಅವರವರಿಗೆ ಅನುಭವದಲ್ಲಿದೆಯಲ್ಲ !- ಎಂದು ತಟ್ಟನೆ ತೋರಬಹುದು. ಆದರೆ ಹೀಗೆ ಬೇರೆಬೇರೆಯ ಆತ್ಮರುಗಳು ಇರುವಂತೆ ತೋರುವದಕ್ಕೆ ಕಾರಣವು ನಾವು ಅಹಂಪ್ರತ್ಯಯಗಮ್ಯನಾದವನೇ ನಿಜವಾದ ಆತ್ಮನು- ಎಂದು ತಿಳಿದಿರುವದೇ ಆಗಿದೆ. ಒಳಹೊಕ್ಕು ನೋಡಿದರೆ ನಾವುಗಳು 'ನಾನು', 'ನಾನು'- ಎಂದು ಅರಿತುಕೊಂಡಿರುವ ಈ ಆತ್ಮನು ಮಿಥ್ಯಾತ್ಮನು, ಒಂದು ತಪ್ಪುತಿಳಿವಳಿಕೆಯಿಂದ ಹಾಗೆಂದು ತೋರುವ ಆತ್ಮನು, ದೇಹ, ಇಂದ್ರಿಯಗಳು, ಮನಸ್ಸು- ಇವುಗಳನ್ನೂ, ಇವುಗಳನ್ನು ಬೆಳಗುತ್ತಿರುವ ಸಾಕ್ಷಿಯನ್ನೂ ಶಾಸ್ತ್ರದೃಷ್ಟಿಯನ್ನವಲಂಬಿಸಿ ಬಿಡಿಸಿಕೊಳ್ಳಲಾರದೆ ಇರುವಾಗ ನಮಗೆ ಆತ್ಮ, ಅನಾತ್ಮ- ಇವೆರಡರ ಕಲೆಬೆರಕೆಮಾಡಿಕೊಂಡ ಈ ತಪ್ಪು ತಿಳಿವಳಿಕೆಯು ಇರುತ್ತಿರುವದು. ಸಾಕ್ಷಿಯನ್ನು ನಾವು ವಿಂಗಡಿಸಿ ಅರಿತುಕೊಳ್ಳದೆ ಇರುವದು ಮಾತ್ರವಲ್ಲದೆ ಅವನು ದೇಹೇಂದ್ರಿಯಮನಸ್ಸುಗಳಿಗೆ ಕಟ್ಟುಬಿದ್ದಿರುವನೆಂದೇ ಭಾವಿಸಿಕೊಂಡಿರುತ್ತೇವೆ. ದೇಹೇಂದ್ರಿಯಾದಿಗಳಲ್ಲಿಯೂ ಚೈತನ್ಯವಿರುವಂತೆ ಭಾವಿಸಿಕೊಂಡು ಅವೇ ಆತ್ಮನೆಂದು ಭ್ರಮಿಸಿರುತ್ತೇವೆ. ಅವನ್ನೆಲ್ಲ ಬೆಳಗುವ ಆತ್ಮನು ಅಸಂಗನಾದ ಸಾಕ್ಷಿಯಾದರೂ ಅವನಿಗೆ ಆ ದೇಹೇಂದ್ರಿಯಗಳ ಮಾರ್ಪಾಡೂ ಉಂಟೆಂದು ಅವನ ಸ್ವರೂಪವನ್ನೂ ಧರ್ಮಗಳನ್ನೂ ತಪ್ಪಾಗಿ ತಿಳಿದುಕೊಂಡಿರುತ್ತೇವೆ. ಈ ತಪ್ಪು ತಿಳಿವಳಿಕೆಯನ್ನು ಅನ್ಯೋನ್ಯಾಧ್ಯಾಸ, **ಅವಿದ್ಯೆ-** ಎಂದು ವೇದಾಂತಿಗಳು ಕರೆಯುತ್ತಾರೆ. ಶಾಸ್ತ್ರದೃಷ್ಟಿಯನ್ನು ಅವಲಂಬಿಸಿ ಆತ್ಮಸ್ವರೂಪವನ್ನು ವಿವೇಚಿಸಿ ತಿಳಿದುಕೊಂಡಾಗ ಆತ್ಮನು ಒಬ್ಬನೇ- ಎಂದು ಗೊತ್ತಾಗಿಬಿಡುವದು. ಸೂರ್ಯನು

ಪ್ರತಿಯೊಬ್ಬರ ಮನೆಯ ಮುಂದೆ ಇರುವಂತೆ ತೋರುತ್ತಿದ್ದರೂ ಒಂದೊಂದು ಮನೆಯ ಮುಂದೆ ಒಬ್ಬೊಬ್ಬ ಸೂರ್ಯನು ಇರುತ್ತಾನೆಂದು ತಿಳಿಯುವದು ಹೇಗೆ ತಪ್ಪೋ ಹಾಗೆಯೇ ಪ್ರತಿಯೊಬ್ಬನೂ ತನ್ನತನ್ನ ದೇಹದಲ್ಲಿ ಒಬ್ಬೊಬ್ಬ ಬೇರೆಯ ಆತ್ಮನೆಂದು ತೋರುತ್ತಿದ್ದರೂ ಒಬ್ಬೊಬ್ಬನಿಗೂ ಒಬ್ಬೊಬ್ಬ ಆತ್ಮನಿರುತ್ತಾನೆಂಬುದು ತಪ್ಪೇ ಎಂದು ಸ್ಪಷ್ಟವಾಗಿ ಗೊತ್ತಾಗಿಬಿಡುವದು. ಹೀಗೆ ಅನಾತ್ಮದಿಂದ ವಿಂಗಡಿಸಿ ಆತ್ಮೈಕತ್ವವನ್ನು ನಿಶ್ಚಯಿಸುವ ತಿಳಿವಳಿಕೆಗೆ **ವಿದ್ಯೆ** ಎಂಬ ಹೆಸರನ್ನು ವೇದಾಂತಿಗಳು ಕೊಟ್ಟಿರುತ್ತಾರೆ.

ஃஃஃஃஃஃஃ

# ೬. ಆತ್ಮನ ಅದ್ವಿತೀಯತ್ವ

೨೪. ಮುಖ್ಯಾತ್ಮನೇ ಪರಮಾತ್ಮನು :

ಹಿಂದಿನ ಖಂಡದಲ್ಲಿ ವಿವರಿಸಿರುವ ಆತ್ಮಸ್ವರೂಪವನ್ನು ಭಗವದ್ಗೀತೆಯಲ್ಲಿ ಒಂದು ಶ್ಲೋಕದಲ್ಲಿ ಸಂಗ್ರಹಿಸಿ ಹೇಳಿರುತ್ತದೆ : **'ಉಪದ್ರಷ್ಟಾನುಮನ್ತಾ ಚ ಭರ್ತಾ ಭೋಕ್ತಾ ಮಹೇಶ್ವರಃ । ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ ॥'** ನಮ್ಮ ದೇಹದಲ್ಲಿರುವಂತೆ ಕಾಣಿಸುತ್ತಿರುವ ಈ ಆತ್ಮನು **ಉಪದ್ರಷ್ಟೃವು.** ದೇಹ, ಇಂದ್ರಿಯ, ಮನಸ್ಸು ಮುಂತಾದವುಗಳೆಲ್ಲಕ್ಕಿಂತಲೂ ನಮಗೆ ಹತ್ತಿರವಾಗಿದ್ದುಕೊಂಡು ಎಲ್ಲವನ್ನೂ ನೇರಾಗಿ ನೋಡುತ್ತಿರುವ ದ್ರಷ್ಟೃವೀತನು. ಆದ್ದರಿಂದ ಇವನನ್ನು 'ಸಾಕ್ಷಿ'ಯೆಂದು ಕರೆಯುತ್ತೇವೆ. ಇಂದ್ರಿಯಗಳು ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತಿದ್ದರೂ ಅಸಂಗನಾಗಿದ್ದುಕೊಂಡು, ಅವುಗಳ ವ್ಯಾಪಾರಕ್ಕೆ ಯಾವ ಅಡ್ಡಿಯನ್ನೂ ಮಾಡದಿರುವದರಿಂದ ಇವನು **ಅನುಮಂತೃ** ಒಪ್ಪಿಗೆ ಕೊಡುವವನು. ಇವನು **ಭರ್ತೃ** ಎಂದರೆ ದೇಹೇಂದ್ರಿಯಮನೋಬುದ್ಧಿಗಳು ತಮ್ಮತಮ್ಮ ವ್ಯಾಪಾರವನ್ನು ಮಾಡಿಕೊಂಡಿರುವದಕ್ಕೆ ಬೇಕಾದ ಚೈತನ್ಯಾಭಾಸವನ್ನು ಕೊಟ್ಟು ಪೋಷಿಸುತ್ತಿರುವವನು. ಇವನು **ಭೋಕ್ತೃ** ಎಂದರೆ ಪ್ರಾಣಿಗಳಲ್ಲಿ ಉಂಟಾಗುವ ಭೋಗಗಳೆಲ್ಲವೂ, ಎಂದರೆ ಸುಖದುಃಖಮೋಹರೂಪವಾದ ಅರಿವುಗಳೆಲ್ಲವೂ, ಈತನ ಚೈತನ್ಯಕ್ಕೆ ಕಬಳವಾಗಿಯೇ ಉಂಟಾಗುತ್ತವೆ. ಚೈತನ್ಯವ್ಯಾಪ್ತವಾಗದೆ ಅವು ಉಂಟಾಗುವಂತೆಯೇ ಇಲ್ಲ. ಇವನೇ **ಮಹೇಶ್ವರನು.** ಏಕೆಂದರೆ ಎಲ್ಲರಿಗೂ ಆತ್ಮನಾಗಿರುವದರಿಂದ ಇವನು **ಮಹಾಂತನು** ; ಯಾರೊಬ್ಬರ ಕಟ್ಟಿಗೂ ಒಳಪಡದೆ ಸ್ವತಂತ್ರವಾಗಿದ್ದು ದೇಹಾದಿಗಳೆಲ್ಲವನ್ನೂ ಆಳುವವನಾದ್ದರಿಂದ ಇವನು ಈಶ್ವರನು. ಇವನೇ **ಪರಮಾತ್ಮನು.** ಏಕೆಂದರೆ ದೇಹ, ಇಂದ್ರಿಯಗಳು, ಮನಸ್ಸು, ಬುದ್ಧಿ- ಇವುಗಳೆಲ್ಲವನ್ನೂ ಜನರು 'ನಾನು' ಎಂದು ತಪ್ಪಾಗಿ ತಿಳಿದುಕೊಂಡಿರುವದರಿಂದ ಅವರು ಮಿಥ್ಯಾತ್ಮರು ; ಆದರೆ ಇವನು ಈವರೆಗೆ

ಹೇಳಿರುವ ಉಪದ್ರಷ್ಟೃತ್ವವೇ ಮುಂತಾದ ರೂಪದಿಂದ ಕೂಡಿರುವವನಾದ್ದರಿಂದ ಅಕಲ್ಪಿತನಾದ ಮುಖ್ಯಾತ್ಮನು. ಇವನೇ **ಪರಮಪುರುಷನು.** ಏಕೆಂದರೆ ಶರೀರಾದಿಗಳನ್ನು ಉಪಚಾರಕ್ಕೆ ಪುರುಷರೆಂದು ಕರೆಯುತ್ತಾರೆ. ನಿಜವಾಗಿ ಆ ಪುರುಷರೆಲ್ಲರಿಗಿಂತಲೂ ಇವನೇ ಹೆಚ್ಚಿನವನಾದ್ದರಿಂದ ಪರಮನು ; ಆ ಪುರುಷರೆಲ್ಲರಲ್ಲಿಯೂ ಪೂರ್ಣನಾಗಿರುವದರಿಂದ ಪುರುಷನು (ಗೀ. ೧೩-೨೨).

೨೫. ಮುಖ್ಯಾತ್ಮನು ಮಹಾನ್, ವಿಭು :

ಈ ಆತ್ಮನು ಸರ್ವವನ್ನೂ ವ್ಯಾಪಿಸಿಕೊಂಡಿರುತ್ತಾನೆಂಬುದನ್ನು ಮನಗಾಣಿಸಿ ಹಾಗೆಂದು ತಿಳಿದುಕೊಂಡದ್ದರಿಂದ ಆಗುವ ಪ್ರಯೋಜನವನ್ನು ಶ್ರುತಿಯಲ್ಲಿ ಹೀಗೆಂದು ತಿಳಿಸಿರುತ್ತದೆ : 'स्वप्नान्तं जागरितान्तं चोभौ येनानुपश्यति । महान्तं विभुमात्मानं मत्वा धीरो न शोचति ॥' ಸ್ವಪ್ನಾವಸ್ಥೆಯನ್ನೂ ಜಾಗರಿತಾವಸ್ಥೆಯನ್ನೂ ಯಾವನ ಬಲದಿಂದ ಜನರು ಅರಿತುಕೊಳ್ಳುತ್ತಾರೋ ಆತನೇ ಮಹಾಂತನು, ವಿಭುವು; 'ಆತನೇ ನಾನು' ಎಂದು ಅರಿತುಕೊಂಡವನು ಶೋಕಿಸುವದಿಲ್ಲ (ಕ. ೨-೧-೪)- ಎಂಬುದು ಶ್ರುತಿಯ ಅಕ್ಷರಾರ್ಥವು. ಎಚ್ಚರವಿರುವಾಗ ಕನಸಿರುವದಿಲ್ಲ, ಕನಸಿರುವಾಗ ಎಚ್ಚರವಿರುವದಿಲ್ಲ. ಎಚ್ಚರದೊಳಗಿನ ಪ್ರಪಂಚವು ಎಚ್ಚರವನ್ನು ಬಿಟ್ಟಿರುವದಿಲ್ಲ, ಕನಸಿನೊಳಗಿರುವ ಪ್ರಪಂಚವು ಕನಸನ್ನು ಬಿಟ್ಟಿರುವದಿಲ್ಲ; ಎಚ್ಚರದಲ್ಲಿ ಕಾಣುತ್ತಿರುವ ದೇಹೇಂದ್ರಿಯಮನೋಬುದ್ಧಿಗಳು ಕನಸಿನಲ್ಲಿರುವದಿಲ್ಲ ; ಕನಸಿನಲ್ಲಿ ಕಾಣುವ ದೇಹೇಂದ್ರಿಯಮನೋಬುದ್ಧಿಗಳು ಎಚ್ಚರದಲ್ಲಿರುವದಿಲ್ಲ. ಹೀಗಿರುವದರಿಂದ ದೇಹೇಂದ್ರಿಯಮನೋಬುದ್ಧಿಗಳಿಂದ ಎಲ್ಲವನ್ನೂ ಅರಿಯುತ್ತಿರುವೆನೆಂಬುದು ತಪ್ಪು ತಿಳಿವಳಿಕೆಯೇ, ಮನಸ್ಸು ಎಲ್ಲವನ್ನೂ ವ್ಯಾಪಿಸಿಕೊಂಡು ಅರಿಯುತ್ತಿರುವದೆಂದು ಭಾವಿಸಿರುವದೂ ತಪ್ಪುತಿಳಿವಳಿಕೆಯೇ. ಎಚ್ಚರದಲ್ಲಿಯೂ ಕನಸಿನಲ್ಲಿಯೂ ' ನಾನು', 'ನಾನು'- ಎಂದು ನಾವು ಭಾವಿಸಿಕೊಂಡಿರುವ ಅಹಂಪ್ರತ್ಯಯಗಮ್ಯರೂಪವು, ಕೂಡ ಆಯಾ ಅವಸ್ಥೆಗೆ ಕಟ್ಟುಬಿದ್ದಿರುವದೇ ಹೊರತು ಆತ್ಮನಿಗೆ ಯಾವಾಗಲೂ ಸಂಬಂಧಿಸಿ ಕೊಂಡಿರುವದಿಲ್ಲ. ದೇಶಕಾಲನಿಮಿತ್ತಗಳಿಗೆ ಕಟ್ಟುಬಿದ್ದಿರುವಂತೆ ತೋರುತ್ತಿರುವ ಈ

ಎರಡು ಅವಸ್ಥೆಗಳ ಘಟನೆಯಲ್ಲಿ ಯಾವದೊಂದೂ ಒಂದರಲ್ಲಿರುವದು ಇನ್ನೊಂದರಲ್ಲಿರುವದಿಲ್ಲ. ಹೀಗಿರುವದರಿಂದ ಅಹಂಪ್ರತ್ಯಯಗಮ್ಯನಿಗಿಂತಲೂ ಬೇರೆಯಾದ ನಮ್ಮ ನಿಜವಾದ ಆತ್ಮನೇ ಎರಡವಸ್ಥೆಗಳನ್ನೂ ಅವುಗಳಲ್ಲಿರುವ ಪ್ರಪಂಚವನ್ನೂ ಬೆಳಗುವದಕ್ಕೆ ನಮಗೆ ಸಾಧನವಾಗಿರುತ್ತಾನೆ. ಅವನು ಎರಡವಸ್ಥೆಗಳನ್ನೂ ವ್ಯಾಪಿಸಿಕೊಂಡೇ ಅವುಗಳನ್ನು ಬೆಳಗಿ ತೋರಿಸುತ್ತಿರುತ್ತಾನೆ; ಆದ್ದರಿಂದ ಅವಕ್ಕೆ ಚಿದ್ವ್ಯಾಪ್ತವಾಗದೆ ಇರುವಿಕೆಯೇ ಇಲ್ಲ. ಹೀಗಿರುವದರಿಂದ ಈ ಆತ್ಮನು **ಮಹಾಂತನೂ, ವಿಭುವೂ** ಆಗಿರುತ್ತಾನೆ. ಅವಸ್ಥೆಗಳಿಗಿಂತಲೂ ಅವುಗಳಲ್ಲಿರುವ ಸಕಲ ಪ್ರಪಂಚಕ್ಕಿಂತಲೂ ವ್ಯಾಪಕನಾಗಿರುವದಲ್ಲದೆ, ಅವುಗಳ ಹಂಗಿಲ್ಲದ ಸ್ವತಂತ್ರನೂ ಆಗಿರುತ್ತಾನೆ. ಕನಸಿಲ್ಲದ ತನಿನಿದ್ರೆಯಲ್ಲಿಯೂ, ಧ್ಯಾನಮಾಡಿದರೆ ಸಮಾಧಿಯಲ್ಲಿಯೂ, ಆತ್ಮನ ಈ ಸ್ವರೂಪವು ಅನುಭವಕ್ಕೆ ಬರುತ್ತದೆ. ಇದನ್ನರಿತುಕೊಂಡವರಿಗೆ ಎಚ್ಚರದಲ್ಲಿರುವ ಸುಖದುಃಖಗಳಾಗಲಿ ಕನಸಿನಲ್ಲಿ ತೋರುವ ಸುಖದುಃಖಗಳ ಆಭಾಸವಾಗಲಿ ಎಂದಿಗೂ ನಿಜವಾಗಿ ಸಂಬಂಧಿಸಿರುವದೇ ಇಲ್ಲ. ಇಂಥ ಆತ್ಮನೇ ತಾನು ಎಂದು ತಿಳಿದವನಿಗೆ ಸಂಸಾರದ ಶೋಕಮೋಹಗಳು ಹೇಗೆತಾನೆ ಆದಾವು?- ಎಂಬುದು ಶ್ರುತಿಯ ಭಾವಾರ್ಥ.

೨೬. ಪರಮಾತ್ಮನ ಸ್ವರೂಪವನ್ನು ತಿಳಿಸುವ ಪ್ರಕ್ರಿಯಾಭೇದಗಳು :

ಪರಮಾತ್ಮನು ಅದ್ವಿತೀಯನೇ- ಎಂದು ತಿಳಿಸುವದಕ್ಕೆ ಉಪನಿಷತ್ತುಗಳಲ್ಲಿ ಅನೇಕ ಪ್ರಕ್ರಿಯೆಗಳನ್ನು ಹೇಳಿರುತ್ತದೆ. ಬ್ರಹ್ಮವು ಜಗತ್ತಿನ ಸೃಷ್ಟಿಸ್ಥಿತಿಪ್ರಲಯಗಳಿಗೆ ಕಾರಣವಾಗಿದೆ, ತಾನು ಸೃಷ್ಟಿಸಿರುವ ಜಗತ್ತಿನೊಳಗೆ ಜೀವರೂಪದಿಂದ ಹೊಕ್ಕಿರುತ್ತದೆ, ಅಲ್ಲಿ ಅನ್ನಮಯವೇ ಮುಂತಾದ ಐದುಕೋಶಗಳಿಂದ ಆವೃತವಾಗಿರುವಂತೆ ತೋರುತ್ತದೆ, ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನೂ ಅನುಭವಿಸುವಂತೆ ಕಾಣಿಸುತ್ತಿರುತ್ತದೆ- ಎಂಬಿವು ಈ ಪ್ರಕ್ರಿಯೆಗಳಲ್ಲಿ ಮುಖ್ಯವಾದವುಗಳು.

**ಅವಸ್ಥಾತ್ರಯಪ್ರಕ್ರಿಯೆ**ಯ ಸಾರವನ್ನು ಮೇಲೆ ಸಂಗ್ರಹವಾಗಿ ತಿಳಿಸಿರುತ್ತೇವೆ. ಆತ್ಮನು ಅವಸ್ಥಾತ್ರಯವನ್ನು ಅನುಭವಿಸುವ ಸಂಸಾರಿಯಂತೆ

ಕಂಡರೂ ನಿಜವಾಗಿ ಅವಸ್ಥೆಗಳು ಅವನಿಗಿಂತ ಬೇರೆಯಾಗಿಲ್ಲವೇ ಇಲ್ಲ. ಅವನು ಅದ್ವಿತೀಯನಾಗಿರುತ್ತಾನೆ- ಎಂಬುದು ಆ ಪ್ರಕ್ರಿಯೆಯ ಸಾರವು.

ಇದರಂತೆ ಜಾಗ್ರತ್ತಿನಲ್ಲಿ ನಮಗೆ ಕಾಣುವ ಜಗತ್ತು ಪ್ರಲಯದಲ್ಲಿ ಆತ್ಮನಲ್ಲಿ ಒಂದಾಗಿದ್ದು ಆತ್ಮನಿಂದಲೇ ಸೃಷ್ಟಿಯಾಗಿ ಅವನಲ್ಲಿಯೇ ಇದ್ದುಕೊಂಡಿರುತ್ತದೆ ; ಆದ್ದರಿಂದ ಅದು ಆತ್ಮನಿಗಿಂತ ಬೇರೆಯಾಗಿರುವದಿಲ್ಲ- ಎಂಬುದು **ಜಗಜ್ಜನ್ಮಾದಿ ಕಾರಣತ್ವವನ್ನು** ಹೇಳುವ ಪ್ರಕ್ರಿಯೆಯ ಸಾರವು. ಜಗತ್ತು ನಿಜವಾಗಿಯೂ ಬ್ರಹ್ಮದಿಂದ ಹುಟ್ಟುವದಿಲ್ಲ ; ಏಕೆಂದರೆ ಹುಟ್ಟಿರುವಂತೆ ತೋರುವಾಗಲೂ ಅದು ಬ್ರಹ್ಮಕ್ಕಿಂತ ವ್ಯತಿರಿಕ್ತವಾಗಿರುವದೇ ಇಲ್ಲ. **'ತದನನ್ಯತ್ವಮಾರಮ್ಭಣ ಶಬ್ದಾದಿಭ್ಯಃ'** ಕಾರ್ಯವಾಗಿರುವ ಜಗತ್ತೆಂಬುದು ಕಾರಣವಾಗಿರುವ ಬ್ರಹ್ಮಕ್ಕಿಂತ ಅನ್ಯವಲ್ಲ, ಏಕೆಂದರೆ ಶ್ರುತಿಯಲ್ಲಿ ಆರಂಭಣಶಬ್ದವೇ ಮುಂತಾದದ್ದು ಇದೆ (ಬ್ರ.ಸೂ.೨-೧-೧೪)- ಎಂದು **ಬ್ರಹ್ಮಸೂತ್ರ**ದಲ್ಲಿ ನಿರ್ಣಯಿಸಿದೆ. ಶ್ರುತಿಯಲ್ಲಿ 'यथा सोम्यैकेन मृत्पिण्डेन सर्वं मृन्मयं विज्ञातं स्याद्वाचारम्भणं विकारो नामधेयं मृत्तिकेत्येव सत्यम्' ಹೇಗೆ ಒಂದು ಮಣ್ಣುಮುದ್ದೆಯೆಂಬ ತತ್ತ್ವವನ್ನು ಅರಿತುಕೊಂಡರೆ ಮಣ್ಣಿನಿಂದ ಆದ ಕಾರ್ಯವನ್ನೆಲ್ಲ ಅರಿತುಕೊಂಡಂತೆ ಆಗುವದೋ, ಕಾರ್ಯವೆಂಬುದು ವಾಚಾರಂಭಣವಾದ, ಬರಿಯ ಮಾತಿನಿಂದ ಹೇಳಬೇಕಾಗಿರುವ, ಹುಸಿತೋರಿಕೆಯಾಗಿರುವದೋ, ಮಣ್ಣೆಂಬುದೊಂದೇ ನಿಜವಾಗಿರತಕ್ಕದ್ದೋ ಹಾಗೆ ಜಗತ್ತು ವಾಚಾರಂಭಣವು, ಹುಸಿತೋರಿಕೆಯು, ಬ್ರಹ್ಮವೊಂದೇ ಸತ್ಯವು (ಛಾಂ.೬-೧-೧)- ಎಂದು ದೃಷ್ಟಾಂತದಿಂದ ಆತ್ಮೈಕತ್ವವನ್ನು ಗಟ್ಟಿಗೊಳಿಸಿರುತ್ತದೆ ; ಆದ್ದರಿಂದ ಜಗತ್ತು ನಿಜವಾಗಿ ಪರಮಾತ್ಮನಿಗಿಂತ ಬೇರೆಯಾಗಿಲ್ಲ- ಎಂಬುದು ಈ ಬ್ರಹ್ಮಸೂತ್ರದ ಅಭಿಪ್ರಾಯವು. **ಪರಮಾತ್ಮನು ಸೃಷ್ಟಿಯೊಳಗೆ ಪ್ರವೇಶಿಸಿರುತ್ತಾನೆ-** ಎಂಬ ಶ್ರುತಿಯ ಅಭಿಪ್ರಾಯವೇನೆಂದರೆ ಅಂತಃಕರಣದ ಸಂಬಂಧದಿಂದ ಅವನಿಗೆ ನೋಡುವದು, ಕೇಳುವದು, ಯೋಚಿಸುವದು- ಮುಂತಾದ ವಿಶೇಷಜ್ಞಾನವಾಗಿ ರುವಂತೆಯೂ ಅವನು ಅದರಿಂದ ಸಂಸಾರಿಯಾಗಿರುವಂತೆಯೂ ಕಾಣಿಸುತ್ತಿರುತ್ತಾನೆ. ಆದರೆ ನಿಜವಾಗಿ ನೋಡಿದರೆ ಆಗಲೂ ಅವನು ಎಲ್ಲಕ್ಕೂ

ಸಾಕ್ಷಿಯಾಗಿರುವ ಚೈತನ್ಯದ ಸ್ವರೂಪವಾಗಿಯೇ ಇರುತ್ತಾನೆ. ಆದ್ದರಿಂದಲೇ ಶ್ರುತಿಯು 'य एषोऽणिमैतदात्म्यमिदं सर्वं तत्सत्यं स आत्मा तत्त्वमसि' ಈ ಸೂಕ್ಷ್ಮವಾಗಿರುವ ತತ್ತ್ವವಿದೆಯಲ್ಲ, ಇದೇ ಈ ಜಗತ್ತಿಗೆಲ್ಲ ಆತ್ಮನು, ಅದೇ ಸತ್ಯವು; ಅದೇ ನೀನು (ಛಾಂ.೬-೮-೭)- ಎಂದು ಉಪದೇಶಿಸುತ್ತಿದೆ.

ಇನ್ನು **ಪಂಚಕೋಶವಿವೇಕಪ್ರಕ್ರಿಯೆಯ** ರೀತಿ ಹೇಗೆಂದರೆ : ಅನ್ನರಸದಿಂದಾಗಿರುವ ದೇಹ, ಪ್ರಾಣಾಪಾನಾದಿವೃತ್ತಿಗಳಿಂದಾಗಿರುವ ಪ್ರಾಣ, ಸಂಕಲ್ಪಾದ್ಯಾತ್ಮಕವಾಗಿರುವ ಮನಸ್ಸು, ಶಬ್ದಾದಿವೃತ್ತಿಗಳಿಂದೊಡಗೂಡಿರುವ ಬುದ್ಧಿ, ಪ್ರಿಯಮೋದಾದಿಗಳಿಂದಾಗಿರುವ ಆನಂದ- ಎಂಬ ಐದು ಉಪಾಧಿಗಳು, ಸುತ್ತುಗಟ್ಟುಗಳು, ಆತ್ಮನನ್ನು ಆಯಾ ರೂಪದಿಂದಲೇ ಕೂಡಿರುವವನಂತೆ ಮಾಡಿ ತೋರಿಸುತ್ತಿರುತ್ತವೆ. ಇವುಗಳು ಒಂದಕ್ಕಿಂತ ಒಂದು ಒಳಗೆ ಇದ್ದುಕೊಂಡಿರುತ್ತವೆ; ಒಂದಕ್ಕಿಂತ ಒಂದು ಸೂಕ್ಷ್ಮವಾಗಿಯೂ ವ್ಯಾಪಕವಾಗಿಯೂ ಇರುತ್ತವೆ. ಇವೆಲ್ಲಕ್ಕೂ ಒಳಗಿದ್ದು ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಆತ್ಮನು ಆನಂದಸ್ವರೂಪನೇ ಆಗಿರುತ್ತಾನೆ. ಅವನಿಗೆ ಸಂಸಾರದ ಯಾವ ದುಃಖವೂ ಇರುವದಿಲ್ಲ.

ಹೀಗೆ ಬೇರೆಬೇರೆಯ ರೀತಿಯಿಂದ ಶ್ರುತಿಗಳಲ್ಲಿ ನಮ್ಮ ಆತ್ಮನು ಯಾವ ಪ್ರಪಂಚಧರ್ಮವೂ ಇಲ್ಲದೆ, ಯಾವ ಸಂಸಾರದ ಕಲಂಕವೂ ಇಲ್ಲದೆ, ತಾನೇ ತಾನಾಗಿರುವನೆಂಬುದನ್ನು ಅನುಭವಕ್ಕೆ ಬರುವಂತೆ ತಿಳಿಸಿಕೊಟ್ಟಿರುತ್ತದೆ.

## ೨೭. ನಮ್ಮ ಆತ್ಮನ ಪರಮಾರ್ಥಸ್ವರೂಪ :

ಈವರೆಗೆ ವರ್ಣಿಸಿರುವ ಆತ್ಮಾನಾತ್ಮರುಗಳ ಸ್ವಭಾವವಿವೇಚನೆಯಿಂದ ಏನು ಸಿದ್ಧವಾಗುವದೆಂಬುದನ್ನು ಒಂದು ಶ್ರುತಿವಾಕ್ಯದಿಂದ ವಿಶದಪಡಿಸಬಹುದು : 'एको देवः सर्वभूतेषु गूढः सर्वव्यापी सर्वभूतान्तरात्मा। कर्माध्यक्षः सर्वभूताधिवासः साक्षी चेता केवलो निर्गुणश्च॥' ॥' (ಶ್ವೇ.೬-೧೧). (೧) **ಒಬ್ಬ ದೇವನೇ ಸರ್ವಭೂತಗಳಲ್ಲಿಯೂ ಇದ್ದುಕೊಂಡಿರುತ್ತಾನೆ** : ಪ್ರಾಣಿಗಳು

ಧರ್ಮಾಧರ್ಮಗಳ ತಾರತಮ್ಯದಿಂದ ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಗಳ ವರೆಗಿನ ಪ್ರಾಣಿಗಳು ಬಗೆಬಗೆಯ ಶರೀರೇಂದ್ರಿಯಸಂಘಾತಗಳನ್ನು ಪಡೆದುಕೊಂಡು ಸುಖದುಃಖಗಳ ತಾರತಮ್ಯವನ್ನು ಅನುಭವಿಸುತ್ತಿರುವಂತೆ ವ್ಯವಹಾರದೃಷ್ಟಿಗೆ ತೋರುತ್ತಿರುವವಷ್ಟೆ? ಆದರೆ ಇವುಗಳಲ್ಲೆಲ್ಲ ಒಬ್ಬನೇ ಒಬ್ಬ ದೇವನು ಸಮನಾಗಿ ಇದ್ದುಕೊಂಡಿರುವನು. ಪ್ರಾಣಿಗಳ ಈ ತಾರತಮ್ಯದಿಂದ ಆತನೇನೂ ತಾರತಮ್ಯವನ್ನು ಪಡೆದುಕೊಂಡಿರುವದಿಲ್ಲ. (೨) **ಆತನು ಸರ್ವವ್ಯಾಪಿ :** ಹೊರಗಿನ ಭೌತಿಕಪ್ರಪಂಚದ ವಸ್ತುಗಳು ಒಂದಕ್ಕಿಂತ ಒಂದು ವ್ಯಾಪಕವಾಗಿರುತ್ತಿರುವವು. ಇಂದ್ರಿಯಗಳೂ ಮನೋಬುದ್ಧಿಗಳೂ ಅವನ್ನು ತಮ್ಮ ಬೆಳಕಿನಿಂದ ವ್ಯಾಪಿಸಿಕೊಂಡಿರುವಂತೆ ಕಾಣುತ್ತಿರುವವು. ಆದರೆ ಇವೆಲ್ಲವನ್ನೂ ದೇಶಕಾಲಗಳ ಸಮೇತವಾಗಿ ಆ ದೇವನೊಬ್ಬನೇ ತನ್ನ ಚೈತನ್ಯದ ಬೆಳಕಿನಿಂದ ವ್ಯಾಪಿಸಿಕೊಂಡಿರುತ್ತಾನೆ. ಅವನಿಗಿಂತ ವ್ಯಾಪಕವಾದ ಮತ್ತೊಂದು ತತ್ತ್ವವು ಯಾವುದೂ ಇರುವದಿಲ್ಲ. (೩) **ಅವನು ಸರ್ವಭೂತಾಂತರಾತ್ಮನು :** ಪ್ರಾಣಿಗಳು ದೇಹ, ಇಂದ್ರಿಯ, ಮನಸ್ಸು- ಮುಂತಾಗಿ ಯಾವಯಾವದನ್ನೋ ತಮ್ಮ ಆತ್ಮನೆಂದು ತಪ್ಪಾಗಿ ತಿಳಿದುಕೊಂಡಿರುವವು. ಆ ತಪ್ಪುತಿಳಿವಳಿಕೆಯು ಆ ಪ್ರಾಣಿಗಳ ದೃಷ್ಟಿಯ ಸೂಕ್ಷ್ಮತೆಯ ತಾರತಮ್ಯಕ್ಕೆ ಅನುಗುಣವಾಗಿರುವದು. ಅವು ತಮ್ಮ ಆತ್ಮನೆಂದು ತಿಳಿದುಕೊಂಡಿರುವ ಆ ಮಿಥ್ಯಾತ್ಮಗಳು ಒಂದಕ್ಕಿಂತ ಒಂದು ಅಷ್ಟಷ್ಟುಮಟ್ಟಿಗೆ ಒಳಗೆ ಇರುತ್ತವೆ. ಹೀಗೆ ಅವು ತಿಳಿದುಕೊಂಡಿರುವ ಆತ್ಮರುಗಳೆಲ್ಲಕ್ಕಿಂತಲೂ ತೀರ ಒಳಗೆ ಇರುವ ಆತ್ಮನೇ ಈ ಮುಖ್ಯಾತ್ಮನು. ಅವನು ಎಲ್ಲಾ ಪ್ರಾಣಿಗಳಿಗೂ ಆತ್ಮನಾಗಿರುತ್ತಾನೆ. (೪) **ಅವನು ಕರ್ಮಾಧ್ಯಕ್ಷನು :** ಜೀವರುಗಳು ತಾವು ಕರ್ಮಗಳನ್ನು ಮಾಡಿ ಅವುಗಳ ಫಲವನ್ನು ಭೋಗಿಸುವೆವೆಂದು ಭಾವಿಸಿಕೊಂಡಿರುತ್ತಾರೆ. ಆದರೆ ನಿಜವಾಗಿ ಅವರೆಲ್ಲರ ಆತ್ಮನಾಗಿರುವ ಈ ಆತ್ಮನೇ ಕರ್ಮಕ್ಕೆಲ್ಲ ಅಧ್ಯಕ್ಷನು ; ಅವುಗಳೆಲ್ಲವನ್ನೂ ತನ್ನ ಬೆಳಕಿನಿಂದ ನೋಡುತ್ತಿರುವ ಸಾಕ್ಷಿಯು, ಮತ್ತು ಆ ಕರ್ಮಗಳಿಗೆಲ್ಲ ದೊರಕಬೇಕಾದ ಫಲಗಳು ದೊರಕುವಂತೆ ಮಾಡಿರುವ ಒಡೆಯನು. ಏಕೆಂದರೆ ಈತನ ಚೈತನ್ಯವೇ ಆ ಕರ್ಮಗಳಿಗೆಲ್ಲಕ್ಕೂ ಆ ಫಲಗಳಿಗೆಲ್ಲಕ್ಕೂ ಇರವನ್ನು ಕೊಟ್ಟಿರುತ್ತದೆ. ಇವನು ಮಾತ್ರ ಯಾವ ಕರ್ಮಗಳ

ಅಂಟೂ ಇಲ್ಲದೆ ಇರುತ್ತಾನೆ. (೫) **ಈತನೇ ಸರ್ವಭೂತಾಧಿವಾಸನು :** ಇವನು ಎಲ್ಲ ಭೂತಗಳೊಳಗೂ ಇದ್ದುಕೊಂಡಿರುವವನು. ಆಯಾ ಭೂತಗಳ ಶರೀರಾದಿಗಳಲ್ಲಿ ಅಭಿಮಾನವಿರುವ ಅಹಂಪ್ರತ್ಯಯಗಮ್ಯನಾದ ಆತ್ಮನು ಆಯಾ ಶರೀರಗಳಲ್ಲಿ ಮಾತ್ರ ವಾಸವಾಗಿರುತ್ತಾನೆ. ಆ ಶರೀರಗಳಿಗಿಂತ ಬೇರೆಯಾದ ಶರೀರಗಳಲ್ಲಿ ತನಗೆ ಅನುಕೂಲವೆಂಬ ಕಾರಣದಿಂದ ಪ್ರೇಮವೋ, ತನಗೆ ಪ್ರತಿಕೂಲವೆಂಬ ಕಾರಣದಿಂದ ದ್ವೇಷವೋ, ಅಥವಾ ತನಗೆ ಅನುಕೂಲವೂ ಅಲ್ಲ, ಪ್ರತಿಕೂಲವೂ ಅಲ್ಲ- ಎಂಬ ಕಾರಣದಿಂದ ಔದಾಸೀನ್ಯವೋ, ಆ ಅಹಂಪ್ರತ್ಯಯಗಮ್ಯನಾದ ಆತ್ಮನಿಗೆ ಇರುತ್ತದೆ. ಆದರೆ ಈ ಸರ್ವಾತ್ಮನಿಗೆ ಮಾತ್ರ ಯಾವ ದೇಹದಲ್ಲಿಯೂ ಅಭಿಮಾನವಾಗಲಿ ದ್ವೇಷವಾಗಲಿ ಇರುವದಿಲ್ಲ; ಇವನು ಅವುಗಳೆಲ್ಲದರಲ್ಲಿಯೂ ಪ್ರೀತಿದ್ವೇಷಗಳಿಲ್ಲದೆ ಸಮವಾಗಿಯೇ ಇರುವನು. (೬) ಹೀಗಿರುವದರಿಂದಲೇ ಇವನು ಎಲ್ಲ ಪ್ರಾಣಿಗಳ ಕೃತಾಕೃತಕರ್ಮವನ್ನೂ ನೋಡುತ್ತಿರುವ **ಸಾಕ್ಷಿ**ಯಾಗಿರುವನು. (೭) ಇವನು **ಚೇತನನು,** ಶುದ್ಧಚೈತನ್ಯ ಸ್ವರೂಪನಾಗಿದ್ದುಕೊಂಡು ತೋರುತ್ತಿರುವ ಜಗತ್ತಿಗೆಲ್ಲ ಇರವನ್ನೂ ತೋರಿಕೆ ಯನ್ನೂ ಇತ್ತಿರುವಾತನು. (೮) ಇವನು **ಕೇವಲನು,** ತನ್ನ ಇರವಿಗೆ ಮತ್ತೊಂದರ ಹಂಗಿಲ್ಲವಾದ್ದರಿಂದಲೂ ದೇಶಕಾಲವಸ್ತುಗಳ ಕಟ್ಟಿಲ್ಲದವನಾದ್ದರಿಂದಲೂ ನಿರಪೇಕ್ಷಸತ್ಯಸ್ವರೂಪನಾದವನು. ಇವನಿಗಿಂತ ಬೇರೆಯಾಗಿ ತೋರುವದು ಯಾವದೇ ಆಗಲಿ, ಈತನ ಇರವಿನಿಂದಲೇ ಇದೆಯೆನ್ನಿಸಿಕೊಳ್ಳಬೇಕಾಗಿರುವದ ರಿಂದ ತಾನು ತೋರುವ ರೂಪದಲ್ಲಿ ನಿಜವಾಗಿ ಸತ್ಯವಲ್ಲ, ಮಿಥ್ಯೆ, ಅನೃತ. ಆದ್ದರಿಂದ ಇವನು ಕೇವಲನು, ಎಂದರೆ **ಅದ್ವೈತ**ನಾಗಿರುತ್ತಾನೆ. (೯) ಆದ್ದರಿಂದಲೇ ಇವನು **ನಿರ್ಗುಣನು,** ಯಾವ ಧರ್ಮಗಳಿಂದಲೂ ತನ್ನ ಸ್ವರೂಪದಲ್ಲಿ ಹೆಚ್ಚುಕಡಿಮೆಗಳಾಗುವದಕ್ಕೆ ಅವಕಾಶವೀಯದವನು. 'ನೇತಿ ನೇತಿ' ಹೀಗಲ್ಲ, ಹೀಗಲ್ಲ- ಎಂದುಮಾತ್ರವೇ ವರ್ಣಿಸುವದಕ್ಕೆ ತಕ್ಕ ಸ್ವರೂಪದವನಾಗಿ ರುತ್ತಾನೆ.

# ೭. ಜ್ಞಾನಸಾಧನಗಳು

೨೮. ವೇದಾಂತಜ್ಞಾನದ ಫಲವು ಇಲ್ಲಿಯೇ ಅನುಭವಕ್ಕೆ ಬರತಕ್ಕದ್ದು :

ಇಲ್ಲಿಯವರೆಗೆ ಪ್ರಸ್ಥಾನತ್ರಯದ ಆಧಾರದಿಂದ- ಎಂದರೆ ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ- ಇವುಗಳನ್ನು ಮೂಲವಾಗಿಟ್ಟುಕೊಂಡು ಪರಿಶುದ್ಧ ವೇದಾಂತದ ಸಾರವನ್ನು ಸಂಗ್ರಹಿಸಿ ತಿಳಿಸಿದ್ದಾಗಿದೆ. ತಮ್ಮನ್ನು ತಾವೇ ಅದ್ವೈತಿಗಳೆಂದು ಕರೆದುಕೊಳ್ಳುತ್ತಿದ್ದ ಅನೇಕ ಆಚಾರ್ಯರುಗಳು ಶಂಕರಾಚಾರ್ಯರಿಗಿಂತ ಮುಂಚೆಯೇ ಪ್ರಸ್ಥಾನತ್ರಯಕ್ಕೆ ತಮ್ಮತಮ್ಮ ವಿವರಣೆಗಳನ್ನು ಬರೆದಿದ್ದರು. ಅವರಲ್ಲಿ ಅನೇಕರು ವೇದಪ್ರಾಮಾಣ್ಯವನ್ನು ಶ್ರದ್ಧಾಮಾತ್ರದಿಂದ ನಂಬಿ ತಮ್ಮತಮ್ಮ ಸಂಪ್ರದಾಯದ ಪ್ರಕಾರದಿಂದ ತಮ್ಮ ತಮ್ಮ ಭಾಷ್ಯಗಳನ್ನು ಬರೆದಿದ್ದರು. ಅದ್ವೈತಿಗಳಲ್ಲದ ದ್ವೈತಾದ್ವೈತಸಿದ್ಧಾಂತದವರೂ ದ್ವೈತಸಿದ್ಧಾಂತದವರೂ ಆ ಆಚಾರ್ಯರಿಗಿಂತ ಹಿಂದೆಯೂ ಇದ್ದರು; ಈಚೆಗೂ ಇರುತ್ತಾರೆ. ಆದರೆ ವೇದಾಂತಸಿದ್ಧಾಂತವು ಸಾರ್ವತ್ರಿಕಾನುಭವಕ್ಕೆ ಹೊಂದಿಕೆಯಾದ ಯುಕ್ತಿಯಿಂದಲೇ ಸಿದ್ಧವಾಗುವದೆಂದು ಹೇಳಿದವರು **ಶ್ರೀಗೌಡಪಾದಾಚಾರ್ಯರು,** ಅವರ ಪ್ರಶಿಷ್ಯರಾದ **ಶಂಕರಾಚಾರ್ಯರು** ಮತ್ತು ಅವರ ಸಂಪ್ರದಾಯಕ್ಕೆ ಸೇರಿದ **ಸುರೇಶ್ವರಾಚಾರ್ಯರು-** ಈ ಮೂವರು ಮಾತ್ರವೇ ಆಗಿರುತ್ತಾರೆ. ಸರ್ವಭೂತಗಳಿಗೂ ಒಬ್ಬ ಪರಮೇಶ್ವರನೇ ನಿಜವಾದ ಆತ್ಮನೆಂಬುದನ್ನು ಈಗಲೇ ಇಲ್ಲಿಯೇ ಅನುಭವಕ್ಕೆ ಹೊಂದಿಸಿಕೊಂಡು ತಿಳಿದುಕೊಳ್ಳಬಹುದೆಂದು ಅವರು ಹೇಳಿರುತ್ತಾರೆ. ಈ ಚಿಕ್ಕ ಪುಸ್ತಕದಲ್ಲಿ ತಿಳಿಸಿರುವ ಪ್ರಕಾರದಿಂದ ವಿಚಾರಮಾಡಿದವರಿಗೆ ಶಾಸ್ತ್ರಪ್ರಾಮಾಣ್ಯವು ಅನುಭವಕ್ಕೆ ವಿರುದ್ಧವಲ್ಲವೆಂಬುದು, ವೇದಾಂತದಿಂದಾಗುವ ಪರಮಪ್ರಯೋಜನವು. ಈಗಲೇ ಇಲ್ಲಿಯೇ ಅನುಭವಕ್ಕೆ ಬರುವದೆಂಬುದೂ ಮನದಟ್ಟಾಗುವದೆಂಬ ಭರವಸೆ ನಮಗೆ ಇದೆ.

## ೨೯. ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳುವದು ಹೇಗೆ?

ಈ ತತ್ತ್ವಜ್ಞಾನವನ್ನು ಅನುಭವಕ್ಕೆ ತಂದುಕೊಳ್ಳಬೇಕೆಂದು ಬಯಸುವವರು ಸದ್ಗುರುಗಳ ಮೂಲಕ ವೇದಾಂತವನ್ನು **ಶ್ರವಣ**ಮಾಡಬೇಕು, ಪೂರ್ವಾಪರ ವಿರೋಧವಿಲ್ಲದಂತೆ ಅದನ್ನು ಯುಕ್ತಿಗೆ ಹೊಂದಿಸಿಕೊಂಡು **ಮನನ**ಮಾಡಿ ನೋಡಬೇಕು, ಆ ಬಳಿಕ ಏಕಾಗ್ರಚಿತ್ತದಿಂದ ತಮ್ಮತಮ್ಮೊಳಗಿನ ಆತ್ಮನನ್ನು **ನಿದಿಧ್ಯಾಸನ**ಮಾಡಬೇಕು, ಲಕ್ಷ್ಯವಿಟ್ಟು ನೋಡಿ ಅನುಭವಕ್ಕೆ ಹೊಂದಿಸಿಕೊಳ್ಳಬೇಕು. 'आत्मनो वा अरे दर्शनेन श्रवणेन मत्या विज्ञानेनेदं सर्वं विदितम् ।' (ಬೃ.೨-೪-೫) ಆತ್ಮನನ್ನು ಹೀಗೆ ಶ್ರವಣಮನನನಿದಿಧ್ಯಾಸನಗಳಿಂದ ಕಂಡುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ; ಏಕೆಂದರೆ ಒಬ್ಬನೇ ಸರ್ವವು, ಅವನು ಅದ್ವಿತೀಯನು- ಎಂದು ಯಾಜ್ಞವಲ್ಕ್ಯನು ತನ್ನ ಪತ್ನಿಯಾದ ಮೈತ್ರೇಯಿಗೆ ಉಪದೇಶಿಸಿರುತ್ತಾನೆ.

## ೩೦. ತತ್ತ್ವವಿಚಾರಕ್ಕೆ ಬೇಕಾದ ಯೋಗ್ಯತೆ :

ಆತ್ಮನನ್ನು ಅರಿತುಕೊಳ್ಳುವದಕ್ಕೆ ಶ್ರವಣಾದಿಗಳೇ ನೇರವಾದ ಸಾಧನವು, ಆದರೆ ಈ ಶ್ರವಣಾದಿಗಳನ್ನು ಮಾಡುವದಕ್ಕೆ ತಕ್ಕ ಯೋಗ್ಯತೆಯು ಬರಬೇಕಾದರೆ ಶಮೆ, ದಮೆ, ಉಪರತಿ, ಶ್ರದ್ಧೆ, ತಿತಿಕ್ಷೆ, ಸಮಾಧಾನ- ಎಂಬ **ಆರು ಸಾಧನಗಳು** ಆಗಿರಬೇಕೆಂದು ಬೃಹದಾರಣ್ಯಕಶ್ರುತಿಯಲ್ಲಿ ಹೇಳಿರುತ್ತದೆ. **ಅಮಾನಿತ್ವ, ಅದಂಭಿತ್ವ- ಮುಂತಾದ ಸಾಧನಗಳನ್ನು** ಭಗವದ್ಗೀತೆಯಲ್ಲಿ ಹೇಳಿರುವದೂ ಈ ಯೋಗ್ಯತೆಗಾಗಿಯೇ. ಇಂದ್ರಿಯಗಳೂ ಅಂತಃಕರಣವೂ ಕಲ್ಮಷಯುಕ್ತವಾಗಿವೆ. ಕಂಡಕಂಡಕಡೆಗೆ ಹರಿಯದೆ ಏಕಾಗ್ರವಾಗಿರುವ ಅಭ್ಯಾಸವಿರುವವರಿಗೆ ಮಾತ್ರವೇ ಈ ಶ್ರವಣಾದಿಗಳು ದಕ್ಕುವವು ; ಅಂಥವರಿಗೆ ಮಾತ್ರವೇ ಆತ್ಮಜ್ಞಾನವು ಲಭಿಸುವದು.

## ೩೧. ಮುಮುಕ್ಷುಗಳು ಮೊದಲು ಮಾಡಬೇಕಾಗಿರುವ ಹೊರಗಿನ ಸಾಧನ :

ಯಾರಿಗೆ ಮನಸ್ಸು ಅಂತರ್ಮುಖವಾಗಿರುವದೋ, ಎಂದರೆ ತಮ್ಮ ಒಳಗೇ ಅಂತಃಕರಣದಲ್ಲಾಗುವ ಹೆಚ್ಚುಕಡಿಮೆಗಳನ್ನು ಅರಿಯುವ ದೃಷ್ಟಿಯಿರುವದೋ, ಅಂಥವರಿಗೆ ಮಾತ್ರವೇ ಶಾಂತ್ಯಾದಿಗಳೂ ಶ್ರವಣಾದಿಗಳೂ ಫಲಕಾರಿಯಾಗುತ್ತವೆ. ಆದರೆ ಯಾರಿಗೆ ಇನ್ನೂ ಬಹಿರ್ಮುಖತ್ವವು ತಪ್ಪಿಲ್ಲವೋ, ಯಾರು ದೇಹಾದಿಗಳಿಂದ ಕರ್ಮವನ್ನು ಮಾಡುವವರು ನಾವೆಂಬ ಬುದ್ಧಿಯಿಂದಲೇ ಕೂಡಿರುವರೋ, ಅವರು ನಿಷ್ಕಾಮರಾಗಿ ಭಗವಂತನ ಪ್ರೀತಿಯಾಗಲೆಂದು **ಕರ್ಮಯೋಗವನ್ನು** ಮಾಡಬೇಕು. **'ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ । ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥'** 'ಯಾವ ಅಂತರ್ಯಾಮಿಯಾದ ಪರಮೇಶ್ವರನಿಂದಲೇ ಪ್ರಾಣಿಗಳೆಲ್ಲವೂ ತಮ್ಮತಮ್ಮ ವ್ಯಾಪಾರಗಳಲ್ಲಿ ತೊಡಗಿರುವವೋ, ಯಾವ ಪರಮಾತ್ಮನು ಈ ಜಗತ್ತೆಲ್ಲವನ್ನೂ ವ್ಯಾಪಿಸಿಕೊಂಡಿರುವನೋ, ಆತನನ್ನು ತಮ್ಮತಮ್ಮ ಕರ್ಮದಿಂದ ಅರ್ಚನೆಮಾಡಿದರೆ ಮಾನವನು ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆಯೆಂಬ ಸಿದ್ಧಿಯನ್ನು ಹೊಂದುವನು' (ಗೀ. ೧೮-೪೬)- ಎಂದು ಗೀತೆಯಲ್ಲಿ ಹೇಳಿದೆ. ಆದ್ದರಿಂದ ಮುಮುಕ್ಷುಗಳಾದವರು ಭಕ್ತಿಪೂರ್ವಕವಾಗಿ ನಿಷ್ಕಾಮಕರ್ಮವನ್ನು ಮಾಡಿ ಪರಮೇಶ್ವರನನ್ನು ಆರಾಧನೆಮಾಡುವದರಿಂದ ಆತನ ಅನುಗ್ರಹದಿಂದ ಚಿತ್ತಶುದ್ಧಿಯುಂಟಾಗಿ ಅಧ್ಯಾತ್ಮಸಾಧನಗಳ ಅಂತರಂಗಸಾಧನಗಳ ಅನುಷ್ಠಾನಕ್ಕೆ ಅರ್ಹತೆಯನ್ನು ಪಡೆದುಕೊಳ್ಳಬೇಕು ; ಆಮೇಲೆ ಶಮಾದಿಸಾಧನಗಳನ್ನು ಮಾಡುವದಕ್ಕೆ ಬರುತ್ತದೆ. **'ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣ ಮುಚ್ಯತೇ । ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥'** ಧ್ಯಾನಯೋಗಸ್ಥಿತಿಗೆ ಏರಬೇಕೆನ್ನುವವನಿಗೆ ಕರ್ಮವೇ ಸಾಧನವಾಗುತ್ತದೆ ; ಆ ಸ್ಥಿತಿಯನ್ನು ಏರಿದವನಿಗೆ ಶಮವೇ ಮುಖ್ಯಸಾಧನವು (ಗೀ.೬-೩)- ಎಂಬ ಗೀತೋಕ್ತಿಗೆ ಇದೇ ಅಭಿಪ್ರಾಯ.

## ೩೨. ಜ್ಞಾನಮಾರ್ಗಕ್ಕಿಂತಲೂ ಸುಲಭವಾದ ಸಾಧನ :

ಈ ಪ್ರಕರಣದಲ್ಲಿ ಉತ್ತಮಾಧಿಕಾರಿಗಳಿಗೆ ಬೇಕಾಗಿರುವ ಅದ್ವೈತ ಸಿದ್ಧಾಂತದ ರೂಪರೇಖೆಯನ್ನು ಮಾತ್ರ ಕೊಟ್ಟಿರುತ್ತದೆ. ಉಪನಿಷತ್ತುಗಳಲ್ಲಿಯೂ ಭಗವದ್ಗೀತೆಯಲ್ಲಿಯೂ **ಮಧ್ಯಮಾಧಿಕಾರಿಗಳಿಗೆಂದು ಉಪಾಸನೆ**ಯನ್ನು - ಭಾವನಾರೂಪವಾದ ಧ್ಯಾನವನ್ನು- ಉಪದೇಶಿಸಿರುತ್ತದೆ. ಯಾರಿಗೆ ಇಲ್ಲಿ ಹೇಳಿರುವ ಜ್ಞಾನಮಾರ್ಗವು ಕಠಿನವೆಂದು ತೋರುವದೋ ಅಂಥ ಮುಮುಕ್ಷುಗಳು ಗುರೂಪದಿಷ್ಟವಾದ ಯಾವದಾದರೊಂದು ಉಪಾಸನೆಯ ಮೂಲಕವಾಗಿ ಪರಮೇಶ್ವರನನ್ನು ಚಿಂತಿಸಬೇಕು. ಅಂಥವರಿಗೆ ಬ್ರಹ್ಮಲೋಕಪ್ರಾಪ್ತಿಯಾಗಿ ಅಲ್ಲಿ ಜ್ಞಾನವು ದೊರಕಿ **ಕ್ರಮಮುಕ್ತಿ**ಯಾಗುವದು ; ಇಲ್ಲಿಯೇ ಕಾಲಕ್ರಮದಲ್ಲಿ ಜ್ಞಾನಮಾರ್ಗವನ್ನು ಅನುಸರಿಸುವ ಯೋಗ್ಯತೆಯು ಲಭಿಸುವದಕ್ಕೂ ಈ ಉಪಾಸನೆಗಳು ಕಾರಣವಾಗಬಹುದು.

## ೩೩. ಸರ್ವಾತ್ಮಭಾವ :

ಈ ಪುಟ್ಟ ಪುಸ್ತಕವನ್ನು ಓದುವವರು ಯಾರೇ ಆಗಲಿ, 'ನಮ್ಮಂಥ ಅಲ್ಪಮತಿಯುಳ್ಳ ಅಲ್ಪವೀರ್ಯರಾದ ಜನರಿಗೆ ಈ ಅದ್ವೈತಜ್ಞಾನವು ಎಂದಿಗೂ ದಕ್ಕಲಾರದು, ಅದರ ಫಲವೂ ನಮ್ಮಂಥವರಿಗೆ ಎಟುಕಲಾರದು'- ಎಂದು ನಿರಾಶರಾಗಬಾರದು. ಈ ಜ್ಞಾನದಿಂದ ಆಗುವ ಫಲವೆಂದರೆ **ಸರ್ವಾತ್ಮಭಾವವು.** ಈ ಪ್ರಪಂಚವೆಲ್ಲವೂ ನಿಜವಾಗಿ ಒಬ್ಬನೇ ಒಬ್ಬ ಪರಮಾತ್ಮನು ; ಇಲ್ಲಿ ಯಾವ ನಾನಾತ್ವವೂ ಇರುವದೇ ಇಲ್ಲ ; ಆ ಪರಮಾತ್ಮನು ನನ್ನ ಸ್ವರೂಪವೇ- ಎಂಬ ಅನುಭವವೇ ಸರ್ವಾತ್ಮಭಾವವೆನಿಸುವದು. ಸರ್ವಾತ್ಮಭಾವಕ್ಕೆ ನಾನೇ ಅದ್ವಿತೀಯವಾದ ಬ್ರಹ್ಮವು ಎಂಬ ಜ್ಞಾನವೊಂದೇ ಉಪಾಯವು ; ಏಕೆಂದರೆ ಅಜ್ಞಾನದಿಂದಲೇ ನಮಗೆ ಅಬ್ರಹ್ಮಭಾವವೂ ಅಸರ್ವತ್ವವೂ ಬಂದಿರುತ್ತದೆ. ಸರಿಯಾದ ಸಾಧನಗಳನ್ನು ಮಾಡಿ ದೇಹ, ಇಂದ್ರಿಯಗಳು, ಮನಸ್ಸು- ಇವುಗಳನ್ನು ಪರಿಶುದ್ಧಗೊಳಿಸಿಕೊಂಡು ಸ್ವಾಧೀನಕ್ಕೆ ತಂದುಕೊಂಡರೆ ಯಾರಿಗಾದರೂ ಈ

ಜ್ಞಾನವು ಅವಶ್ಯವಾಗಿ ಉಂಟಾಗುವದು. ಈ ಜನ್ಮದಲ್ಲಿ ಅಲ್ಲದಿದ್ದರೆ ಮತ್ತೊಂದು ಜನ್ಮದಲ್ಲಿಯಾದರೂ ಈ ಜ್ಞಾನವು ಎಲ್ಲರಿಗೂ ಉಂಟಾಗಿಯೇತೀರುವದು. ಜ್ಞಾನಕ್ಕಾಗಿ ಮಾಡಿದ ಸಾಧನವಾಗಲಿ ವಿಚಾರವಾಗಲಿ ಎಂದಿಗೂ ವ್ಯರ್ಥವಾಗುವದಿಲ್ಲ. ಆ ಸಾಧನದ ಮತ್ತು ಆ ವಿಚಾರದ ಫಲವಾಗಿ ಇಹಪರದಲ್ಲಿ ಉತ್ತಮವಾದ ಸುಖವು ಉಂಟಾಗುವದು ; ಕಾಲಾನುಕಾಲಕ್ಕೆ ಅದ್ವೈತಜ್ಞಾನವೂ ಅದರ ಫಲವಾದ ಸರ್ವಾತ್ಮಭಾವವೂ ಅವಶ್ಯವಾಗಿ ದೊರಕುವವು.

ಆದ್ದರಿಂದ ಈ ಜ್ಞಾನಕ್ಕಾಗಿ ಅವಶ್ಯವಾಗಿ ಪ್ರಯತ್ನವನ್ನು ಮಾಡಬೇಕು. ಅನೇಕ ಸಿದ್ಧಿಗಳನ್ನು ಪಡೆದುಕೊಂಡು ಮಹಾಮಹಿಮರೆನಿಸಿಕೊಂಡಿರುವ ದೇವತೆಗಳಿಗೂ ಅದ್ವೈತಜ್ಞಾನದಿಂದ ಲಭಿಸಬೇಕಾದ ಈ ಪರಮಾನಂದವು ದೊರಕಿರುವದಿಲ್ಲ ; ಮಹಾಮಹಾತಪಸ್ಸುಗಳಿಂದ ಉತ್ತಮವಾದ ಜ್ಞಾನವನ್ನು ಸಂಪಾದಿಸಿಕೊಂಡಿರುವ ಋಷಿಗಳಿಗೂ ಇದು ದೊರಕಿರುವದಿಲ್ಲ. ಇಂದ್ರಾದಿದೇವತೆಗಳಾದರೂ ವಾಮದೇವಾದಿ ಋಷಿಗಳಾದರೂ ನಾನು ಅದ್ವಿತೀಯವಾದ ಬ್ರಹ್ಮವೇ ಆಗಿರುವೆನು- ಎಂಬೀ ಜ್ಞಾನವನ್ನೇ ಸಂಪಾದಿಸಿಕೊಂಡು ಪರಮಾನಂದದಾಯಕವಾದ ಸರ್ವಾತ್ಮಭಾವವನ್ನು ಪಡೆದುಕೊಳ್ಳಬೇಕಾಯಿತು. ಯಾರು ಯಾರು ಈ ಜ್ಞಾನವನ್ನು ಸಂಪಾದಿಸಿ ಕೊಂಡಿರುತ್ತಾರೋ, ಅವರೇ ಶಾಸ್ತ್ರದೃಷ್ಟಿಯುಳ್ಳ ಮಹಾತ್ಮರು, ಅವರಿಗೆ ಮಾತ್ರವೇ ಸರ್ವಾತ್ಮಭಾವವೆಂಬ ಫಲವು ದೊರಕಿರುತ್ತದೆ. ಮನುಷ್ಯರಲ್ಲಿಯೂ ಹೀಗೆಯೇ ಯಾರುಯಾರು ಈ ಜ್ಞಾನವನ್ನು ಸಂಪಾದಿಸಿಕೊಂಡರೋ ಅಂಥವರು ಮಾತ್ರವೇ ಈ ಫಲವನ್ನು ಅನುಭವಿಸಿರುತ್ತಾರೆ. **ಈ ಕಲಿಯುಗದಲ್ಲಿ ಈಗಲೂ ಯಾರು ಬೇಕಾದರೂ ಪ್ರಯತ್ನಪೂರ್ವಕವಾಗಿ ಈ ಜ್ಞಾನವನ್ನು ಸಂಪಾದಿಸಿಕೊಳ್ಳು ವದಕ್ಕೆ ಆಗುತ್ತದೆ.** ಅಂಥವರಿಗೇ ಸರ್ವಾತ್ಮಭಾವದ ಈ ಪರಮಾನಂದವು ದೊರಕುತ್ತದೆ. ಹೀಗೆಂದು ಉಪನಿಷತ್ತುಗಳಲ್ಲಿಯೂ ಗೀತೆಯಲ್ಲಿಯೂ ಸಾರಿರುತ್ತದೆ ; ಬ್ರಹ್ಮಸೂತ್ರದಲ್ಲಿಯೂ ವಿಚಾರಪೂರ್ವಕವಾಗಿ ಇದನ್ನು ನಿರ್ಣಯಿಸಿರುತ್ತದೆ.

## ೩೪. ಕೊನೆಯ ಮಾತು

ವೇದಾಂತವಿಚಾರದಲ್ಲಿ ಆದರವುಳ್ಳ ಜಿಜ್ಞಾಸುಗಳಿಗೆ ಇನ್ನೂ ಈ ವಿಷಯದಲ್ಲಿ ಹೆಚ್ಚಿಗೆ ತಿಳಿಯಬೇಕೆಂಬ ಕುತೂಹಲವುಂಟಾಗಬಹುದು. ಅಂಥವರು ಅಧ್ಯಾತ್ಮಪ್ರಕಾಶಕಾರ್ಯಾಲಯವೇ ಮುಂತಾದ ಕಡೆಗಳಲ್ಲಿ ಪ್ರಕಟವಾಗಿರುವ ವೇದಾಂತಪ್ರಕರಣಗಳನ್ನೂ ಭಾಷ್ಯಾನುವಾದಗಳನ್ನೂ ನೋಡಬೇಕು. ಮುಮುಕ್ಷುಗಳಾದ ಜಿಜ್ಞಾಸುಗಳಿಗೆಲ್ಲ ಸದ್ಗುರುವಿನ ದರ್ಶನವೂ ಸಚ್ಛಾಸ್ತ್ರ ಅವಲೋಕನವೂ ಸಾಧನಗಳ ಅನುಷ್ಠಾನದ ಮರ್ಮವೂ ಆ ಸರ್ವಾಂತರ್ಯಾಮಿಯಾದ ಭಗವಾನ್ನಾರಾಯಣನ ಅನುಗ್ರಹದಿಂದ ಅವಶ್ಯವಾಗಿ ದೊರಕುವವು.